ಶ್ರೀಶಂಕರಾಚಾರ್ಯರ

CC-O. In Public Domain. Digitized by eGangotri

ಶಿವಾನಂದಲಹರೀ



ಶ್ರೀರಾಮಕೃಷ್ಣ ಆಶ್ರಮ, ಮೈಸೂರು – ೫೭೦೦೨೦

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಶಂಕರಾಚಾರ್ಯ ವಿರಚಿತ

ಶಿವಾನಂದಲಹರೀ

(ಮೂಲ ಮತ್ತು ತಾತ್ಪರ್ಯ ಸಹಿತ)

ಶ್ರೀ ವಿದ್ಯಾ ಭಾರತೀ ಪುಸ್ತಕ ಕೇಂದ್ರ
ಶೃಂಗೇರಿ - ೫೭೭೧೩೯

ಶ್ರೀರಾಮಕೃಷ್ಣ ಆಶ್ರಮ
ಮೈಸೂರು ೫೭೦೦೦೧

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಕಾಶಕರು:
ಅಧ್ಯಕ್ಷರು
ಶ್ರೀರಾಮಕೃಷ್ಣಆಶ್ರಮ
ಮೈಸೂರು ೫೭೦ ೦೨೦

ಹನ್ನೊಂದನೆಯ ಮುದ್ರಣ : 2013
ಪ್ರತಿಗಳು : 10,000

ಮುದ್ರಕರು:
ರಿಪ್ಲಿಕ ಆಫ್‌ಸೆಟ್ ಪ್ರಿಂಟರ್ಸ್
ರಾಜಾಜಿನಗರ
ಬೆಂಗಳೂರು - 560 044
ದೂರವಾಣಿ :23357963, 23355337

Sri Vidyabharathi Book Centre, Sringeri

CC-O. In Public Domain. Digitized by eGangotri

ಪೀಠಿಕೆ

ಜೀವೋ ಬ್ರಹ್ಮೈವ ನಾಪರಃ ಎಂದು ಸಾರಿದ ಅದ್ವೈತಕೇಸರಿ ಶಂಕರಾಚಾರ್ಯರು ಭಕ್ತಿರಸದಿಂದ ತುಂಬಿ ತುಳುಕಾಡುತ್ತಿರುವ ಈ ಶಿವಾನಂದಲಹರಿಯನ್ನು ಬರೆದಿರುವರು ಎಂಬ ಪ್ರತೀತಿ ಇದೆ. ಜೀವನು ಬ್ರಹ್ಮವೇ ಹೊರತು ಬೇರೆ ಅಲ್ಲ ಎಂದು ಹೇಳುವ ಸಿದ್ಧಾಂತದಲ್ಲಿ ಭಕ್ತಿಗೆ ಅವಕಾಶವಾದರೂ ಇದೆಯೇ ಎಂಬ ಸಂದೇಹ ಬರುವುದು. ಜ್ಞಾನ ಮತ್ತು ಭಕ್ತಿ ಇವುಗಳಲ್ಲಿ ಒಂದು ಇದ್ದರೆ ಮತ್ತೊಂದು ಇರಲಾರದು ಎಂಬುದು ಸಾಧಾರಣ ಜನರ ಒಂದು ಅಭಿಪ್ರಾಯ. ಆದರೆ ಶಂಕರಾಚಾರ್ಯರು ಜ್ಞಾನದ ಪರಾಕಾಷ್ಠೆಗೆ ಏರಿದ್ದರೂ ಭಕ್ತಿ ಅವರಿಗೆ ಹಗೆಯಲ್ಲ. ಮಾರ್ತಾಂಡನು ಆಕಾಶದಲ್ಲಿ ಬೆಳಗುವಂತೆಯೇ ಚಂದ್ರಮನ ಶೀತಲಕಾಂತಿಯೂ ರಾತ್ರಿಯ ಅದೇ ಆಕಾಶದಲ್ಲಿ ಬೆಳಗುವುದು. ಅಂತೆಯೇ ಶಂಕರಾಚಾರ್ಯರಲ್ಲಿ ಭಕ್ತಿಜ್ಞಾನಗಳ ಸಮ್ಮಿಶ್ರಣವನ್ನು ನೋಡುವೆವು.

ಶ್ರೀಶಂಕರಾಚಾರ್ಯರು ಪ್ರಸ್ಥಾನತ್ರಯಗಳಿಗೆ ಬರೆದಿರುವ ಭಾಷ್ಯಗಳಲ್ಲಿ ಮತ್ತು ಹಲವು ಪ್ರಕರಣಗ್ರಂಥಗಳಲ್ಲಿ ಅದ್ವೈತ ವೇದಾಂತ ಸಿದ್ಧಾಂತವನ್ನು ಒಂದು ವಜ್ರತಳಹದಿಯ

Sri Vidyabharathi Book Centre, Sringeri

CC-0. In Public Domain. Digitized by eGangotri

ಕಣಿವೆಯೊಳಗೆ ಹೋಗುತ್ತಿರುವಾಗ ಸಾಧಕನೊಬ್ಬನಿಗೆ ಇದನ್ನು ಹೇಳಿಕೊಟ್ಟಿರಬೇಕು. ಆದ್ದರಿಂದಲೇ ಶ್ರೀಶಂಕರಾಚಾರ್ಯರು ಸಾರಿದ ''ಜೀವೋ ಬ್ರಹ್ಮೈವ ನಾಪರಃ'' ಎಂಬ ಸಿದ್ಧಾಂತಕ್ಕಿಂತ ''ಭಜಗೋವಿಂದಂ ಮೂಢಮತೇ'' ಎಂಬ ಪಲ್ಲವಿಯು ಹೆಚ್ಚು ಜನ ಉಪಾಸಕರ ನಾಲಿಗೆಯ ಮೇಲೆ ನಲಿದಾಡುತ್ತಿದೆ.

''ಶಿವಾನಂದಲಹರೀ'' – ಆಚಾರ್ಯರ ಹೃದಯದಿಂದ ಭವಜೀವಿಗಳ ಉಪಮೋಚನೆಗಾಗಿ ಇಳಿದುಬಂದ ಭಕ್ತಿಗಂಗೆಯಂತೆ ಇದೆ. ಇಲ್ಲಿ ಬರುವ ಪ್ರತಿಯೊಂದು ಶ್ಲೋಕವೂ ಭಕ್ತ ಭಗವಂತನೊಡನೆ ಐಕ್ಯವಾಗಬೇಕೆಂಬ ಅಭೀಪ್ಸೆಯನ್ನು ವ್ಯಕ್ತಪಡಿಸುವುದು. ಒಂದೊಂದು ಶ್ಲೋಕದಲ್ಲಿಯೂ ಒಂದೊಂದು ಬಗೆಯ ಉಪಮಾನವಿರುವುದು. ಒಂದೊಂದು ರೀತಿಯಲ್ಲಿ ಭಕ್ತನನ್ನು ಭಗವಂತನೊಂದಿಗೆ ಕಟ್ಟಿಹಾಕಿರುವುದು.

ಇವರ ಶೈಲಿ ಕವಿತಾಶೈಲಿ, ಉಪಮಾನಗಳ ಗೊಂಚಲನ್ನೇ ಇಲ್ಲಿ ಕಾಣುವೆವು. ಇಲ್ಲಿ ಬರುವ ವೃತ್ತಗಳಂತೂ ಕಾಲಿಗೆ ಕಿರುಗೆಜ್ಜೆಯನ್ನು ಕಟ್ಟಿಕೊಂಡು ಝಣಝಣರೆಂದು ಅಲುಗಾಡಿಸುತ್ತ ಶಿವನ ಸುತ್ತಲೂ ಮಾಡುತ್ತಿರುವ ನೃತ್ಯದಲ್ಲಿ ಮೈಮರೆತವನ ದೃಶ್ಯವನ್ನು ನಮ್ಮ ಕಣ್ಣಿಗೆ ಕಟ್ಟುತ್ತವೆ. ಇಲ್ಲಿ ಬರುವ ಭಕ್ತಿಭಾವಗಳಂತೂ ಅತ್ಯಂತ ಉತ್ತಮ ದರ್ಜೆಗೆ ಸೇರಿದುವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಭಕ್ತಿ ಮುಕ್ತಿಗಳನ್ನು ಯಾಚಿಸಲಾಗದೆಯೇ ಮೊರೆತು ಪ್ರಾಪಂಚಿಕ ವಸ್ತುಗಳನ್ನಲ್ಲ. ಮೇಲೆ ಕಟ್ಟಿರುವರು. ಆದರೆ ಶ್ರೀಶಂಕರಾಚಾರ್ಯರು ಎಲ್ಲೋ ಕೆಲವು ಜ್ಞಾನಮಲ್ಲರಿಗಾಗಿ ಮಾತ್ರ ಬಂದವರಲ್ಲ. ಈ ಜೀವನದಲ್ಲಿ ಭಕ್ತಿಯ ಹಾದಿಯಲ್ಲಿ ನಡೆಯುವವರೇ ಅಧಿಕಾಂಶರು. ಅವರನ್ನೂ ಆಚಾರ್ಯರು ಮರೆಯಲಿಲ್ಲ. ಅವರಿಗಾಗಿ ಹಲವು ಸ್ತೋತ್ರಗಳನ್ನು ರಚಿಸಿರುವರು. ದೇವಿ, ವಿಷ್ಣು, ಶಿವ ಎಂಬ ಯಾವ ಪಕ್ಷಪಾತವೂ ಇಲ್ಲದೆ ಎಲ್ಲರ ಮೇಲೆಯೂ ಭಕ್ತಿರಸದಿಂದ ತುಂಬಿ ತುಳುಕಾಡುವಂತಹ ಶ್ಲೋಕಗಳನ್ನು ರಚಿಸಿರುವರು.

ಎಲ್ಲಿಯವರೆಗೆ ನಮಗೆ ದೇಹಭಾವವಿದೆಯೋ, ಎಲ್ಲಿಯವರೆಗೆ ನಮಗೆ ಜೀವಭಾವವಿದೆಯೋ, ಅಲ್ಲಿಯವರೆಗೆ ನಮಗೆ ಉಪಾಸನೆಗಾಗಿ ಒಬ್ಬ ಸಗುಣದೇವರ ಆವಶ್ಯಕತೆಯಿರುವುದು. ಇದನ್ನು ಮೀರಿಹೋದರೆ ಇದರ ಆವಶ್ಯಕತೆ ಇಲ್ಲದಿರಬಹುದು. ಆದರೆ ಇದನ್ನು ಮಿರಿಹೋಗುವಂತಹವರ ಸಂಖ್ಯೆ ಯಾವಾಗಲೂ ಅತಿವಿರಳ. ಉಳಿದವರೆಲ್ಲ ನಾಮ, ರೂಪ, ಕಾಲ, ದೇಶ, ಕಾರ್ಯ, ಕಾರಣ ಇವುಗಳ ಬೇಲಿಯೊಳಗೆ ಜೀವಿಸುತ್ತಿರುವರು. ಆದುದರಿಂದ ಇಂಥವರಿಗೆ ಒಬ್ಬ ಪರಮೇಶ್ವರನು ಆವಶ್ಯಕ. ಭವಯಾತ್ರೆಯಲ್ಲಿ ನಡೆಯುತ್ತಿರುವಾಗ ಇವರಿಗೊಂದು ಊರುಗೋಲು ಬೇಕು. ತಮ್ಮ ಕಷ್ಟಸುಖಗಳನ್ನೆಲ್ಲಾ

CC-O. In Public Domain. Digitized by eGangotri

ತೋಡಿಕೊಂಡು ಹೃದಯವನ್ನು ಹಗುರಮಾಡಿಕೊಳ್ಳಲು ಬಿಟ್ಟು ಬಿಟ್ಟು ವ್ಯಕ್ತ ಮಾಡಿದ್ದಾರೆ. ನಿರಾಶೆಯ ದುಃಖದ ಕೋಟಲೆಯ ಶಿವನೇ, ನನ್ನ ಮನಸ್ಸೆಂಬ ಮರ್ಕಟವನ್ನು ಭಕ್ತಿಯ ದಾರದಿಂದ ಕಟ್ಟಿಹಾಕು ಎನ್ನುವರು. ನೀನು ಆದಿಕಿರಾತ, ನನ್ನ ಮನಸ್ಸೆಂಬ ಆಡವಿಯೊಳಗೆ ಬಂದು ವಾಸಿಸು. ಅಲ್ಲಿ ಕಾಮ ಕ್ರೋಧಾದಿ ಷಡ್‌ರಿಪುಗಳೆಂಬ ಘೋರಮೃಗಗಳಿವೆ. ಅವನ್ನು ಬೇಟೆಯಾಡಿ ಆನಂದದಿಂದ ವಿಹರಿಸು ಎನ್ನುವರು. ನಮ್ಮ ಲಲಾಟದ ಮೇಲೆ ಬರೆದಿರುವುದನ್ನು ಶಿವನಿಗೆ ಅಳಿಸುವುದು ಸುಲಭ ಎಂದು ಭಾವಿಸಿ ಅದಕ್ಕಾಗಿ ಬೇಡುವರು. ಬ್ರಹ್ಮನ ಒಂದು ತಲೆಯನ್ನೇ ತನ್ನ ಉಗುರಿನಲ್ಲಿ ತೆಗೆದವನಿಗೆ ನಮ್ಮ ಹಣೆಯ ಮೇಲೆ ತಾನೇ ಬರೆದ ಬರಹವನ್ನು ಅಳಿಸುವುದು ಸಾಧ್ಯವಿಲ್ಲವೆ? ಎಂದು ಕೇಳುವರು. ಶಿವನು ಕೈಲಾಸದ ಕಲ್ಲಿನ ಮೇಲೆ ಏತಕ್ಕೆ ನಡೆಯಲು ಅಭ್ಯಾಸವಮಾಡಿದನು? – ಎಂಬುದನ್ನು ಎಷ್ಟು ಮನೋಹರವಾಗಿ ಆಚಾರ್ಯರು ಬಣ್ಣಿಸುವರು ! ಮುಂದೆ ಭಕ್ತನ ಹೃದಯದಲ್ಲಿ ಸಂಚರಿಸಬೇಕಾಗುವುದು: ಅವನ ಹೃದಯ ಬಹಳ ಒರಟು; ಅದಕ್ಕಾಗಿ ಅವನು ಕೈಲಾಸದ ಕಲ್ಲಿನ ಮೇಲೆ ಈಗಿನಿಂದಲೂ ನಡೆದು ಅಭ್ಯಾಸ ಮಾಡಿಕೊಳ್ಳುತ್ತಿರುವನು! ಶಿವನ ಲೋಕಾನುಕಂಪವನ್ನು ವಿವರಿಸುವ ಶ್ಲೋಕವಂತೂ ಭವ್ಯತೆಯ ಶಿಖರವನ್ನೇ ಮುಟ್ಟಿದೆ!

Sri Vidyabharathi Book Centre, Sringeri

CC-O. In Public Domain. Digitized by eGangotri

ಸಮುದ್ರವನ್ನು ಕಡೆಯುತ್ತಿದ್ದಾಗ ಹಾಲಾಹಲವೆಂಬ ವಿಷ ಉದಯಿಸಲು ಅದಕ್ಕೆ ಅಂಜಿ ದೇವದಾನವರು ಪಲಾಯನಮಾಡುತ್ತಿದ್ದಾಗ ಶಿವನು ಮುಂದೆ ಬಂದು ಹೊರಗಿನ ಲೋಕವನ್ನು ರಕ್ಷಿಸುವುದಕ್ಕಾಗಿ ಅದನ್ನು ತಾನು ಸ್ವೀಕರಿಸಿದನು. ಅದನ್ನು ಪೂರ್ತಿ ನುಂಗಲೂ ಇಲ್ಲ; ಏಕೆಂದರೆ ಅವನ ಒಳಗಿರುವ ಲೋಕವೆಲ್ಲ ಎಲ್ಲಿ ನಾಶವಾಗುವುದೋ ಎಂದು! ಅದು ಕೊರಳ ಮಧ್ಯದಲ್ಲೇ ನಿಂತು, ಅವನು ನೀಲಕಂಠನಾದನು. ಹೀಗೆ ಹಲವು ಭಾವಗಳ ಗೊಂಚಲನ್ನು ಈ ಶತಕದಲ್ಲಿ ಕಾಣುವೆವು. ಪ್ರತಿಯೊಂದು ಶ್ಲೋಕವನ್ನೂ ಭಕ್ತಿಯ ಜೇನಿನಲ್ಲಿ ಅದ್ದಿದಂತೆ ಇದೆ. ಓದುವಾಗ ಇದು ವೇದ್ಯವಾಗುವುದು.

ಪ್ರತಿದಿನ ಪಾರಾಯಣಮಾಡಲು ಯೋಗ್ಯವಾದ ಸ್ತೋತ್ರ ಇದು. ಅರ್ಥ ಸಹಿತ ಮಾಡಿದರೆ ಹೆಚ್ಚು ಪ್ರಯೋಜನವಾಗುವುದೆಂದು ಶ್ಲೋಕದ ಕೆಳಗೇ ಅದರ ತಾತ್ಪರ್ಯವನ್ನೂ ಕೊಟ್ಟಿರುವೆವು.

ಸೋಮನಾಥಾನಂದ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಕಲಾಭ್ಯಾಂ ಚೂಡಾಲಂಕೃತಶಶಿಕಲಾಭ್ಯಾಂ ನಿಜತಪಃ-
ಫಲಾಭ್ಯಾಂ ಭಕ್ತೇಷು ಪ್ರಕಟಿತಫಲಾಭ್ಯಾಂ ಭವತು ಮೇ ।
ಶಿವಾಭ್ಯಾಮಸ್ತೋಕತ್ರಿಭುವನಶಿವಾಭ್ಯಾಂ ಹೃದಿ ಪುನ-
ರ್ಭವಾಭ್ಯಾಮಾನಂದಸ್ಫುರದನುಭವಾಭ್ಯಾಂ ನತಿರಿಯಮ್ ॥ ೧ ॥

೧. ಕಲಾಸ್ವರೂಪರೂ, ಚಂದ್ರಕಲೆಯಿಂದ ಅಲಂಕೃತವಾದ ಶಿವೆಯುಳ್ಳವರೂ ತಮ್ಮ ಪರಸ್ಪರ ತಪಸ್ಸಿನ ಫಲಸ್ವರೂಪರೂ, ಭಕ್ತರಿಗೆ ಅವರು ಬಯಸಿದ ಕಾಮಿತಾರ್ಥಗಳನ್ನು ಅನುಗ್ರಹಿಸಿದವರೂ, ತ್ರಿಭುವನಗಳಿಗೂ ಅತ್ಯಂತ ಮಂಗಳವನ್ನುಂಟು ಮಾಡುತ್ತಿರುವವರೂ, ಹೃದಯದಲ್ಲಿ ಪುನಃ ಪುನಃ ಕಾಣಿಸಿಕೊಳ್ಳುತ್ತಿರುವವರೂ ಆನಂದದೊಡನೆ ಪ್ರಕಾಶಮಾನವಾದ ಸ್ವಾತ್ಮಾನುಭವರೂಪಜ್ಞಾನದಿಂದ ಕೂಡಿದವರೂ ಆದ ಶಿವಶಿವೆಯರಿಗೆ ಈ ನನ್ನ ನಮಸ್ಕಾರವಿರಲಿ!

Sri Vidyabharathi Book Centre, Sringeri

 CC-O. In Public Domain. Digitized by eGangotri

ಗಲಂತೀ ಶಂಭೋ ತ್ವಚ್ಚರಿತಸರಿತಃ ಕಿಲ್ಬಿಷರಜೋ
ದಲಂತೀ ಧೀಕುಲ್ಯಾಸರಣಿಷು ಪತಂತೀ ವಿಜಯತಾಮ್ ।
ದಿಶಂತೀ ಸಂಸಾರಭ್ರಮಣಪರಿತಾಪೋಪಶಮನಂ
ವಸಂತೀ ಮಚ್ಚೇತೋಽಪ್ರದಭುವಿ ಶಿವಾನಂದಲಹರೀ ॥ ೨॥

೨. ಹೇ ಶಂಭೋ, ನಿನ್ನ ಕಥಾನದಿಯಿಂದ ಕವಲೊಡೆದು ಹರಿಯುತ್ತಿರುವ, ಪಾಪಧೂಲಿಯನ್ನು ಹೋಗಲಾಡಿಸುತ್ತಿರುವ, ಬುದ್ಧಿಯೆಂಬ ಕಾಲುವೆಯ ಮಾರ್ಗದಲ್ಲಿ ಧುಮುಕುತ್ತಿರುವ, ಸಂಸಾರದಲ್ಲಿ ಅಲೆಯುವುದರಿಂದ ಉಂಟಾದ ಪರಿತಾಪಕ್ಕೆ ಉಪಶಮನವನ್ನು ಕೊಡುತ್ತಿರುವ, ಈ ಶಿವಾನಂದಲಹರಿಯು (ಕೊನೆಗೆ) ನನ್ನ ಮನಸ್ಸೆಂಬ ಮಡುವಿನಲ್ಲಿ ವಾಸಿಸುತ್ತ ಸರ್ವೋತ್ಕರ್ಷದಿಂದ ಬೆಳಗಲಿ!

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ರಯೀವೇದ್ಯಂ ಹೃದ್ಯಂ ತ್ರಿಪುರಹರಮಾದ್ಯಂ ತ್ರಿನಯನಂ
ಜಟಾಭಾರೋದಾರಂ ಚಲದುರಗಹಾರಂ ಮೃಗಧರಮ್ ।
ಮಹಾದೇವಂ ದೇವಂ ಮಯಿ ಸದಯಭಾವಂ ಪಶುಪತಿಂ
ಚಿದಾಲಂಬಂ ಸಾಂಬಂ ಶಿವಮತಿವಿಡಂಬಂ ಹೃದಿ ಭಜೇ ॥ ೩ ॥

೩. ಮೂರು ವೇದಗಳಿಂದ ತಿಳಿಯಲ್ಪಡತಕ್ಕವನಾದ, ರಮಣೀಯನಾದ, ತ್ರಿಪುರನಾಶಕನಾದ, ಆದಿಪುರುಷನಾದ, ಮುಕ್ಕಣ್ಣನಾದ, ಜಟಾಭಾರದಿಂದ ಗಂಭೀರನಾಗಿ ಕಾಣುತ್ತಿರುವ, ಚಲಿಸುತ್ತಿರುವ ಸರ್ಪಗಳನ್ನು ಹಾರವಾಗಿ ಧರಿಸಿರುವ, ಜಿಂಕೆಯ ಮರಿಯನ್ನು ಧರಿಸಿರುವ, ಮಹಾದೇವನಾದ, ಪ್ರಕಾಶಸ್ವರೂಪನಾದ, ನನ್ನಲ್ಲಿ ದಯೆಯನ್ನು ತಾಳಿರುವ, ಪಶುಪತಿಯಾದ, ಚೈತನ್ಯಾಶ್ರಯನಾದ, ಉಮಾ ಸಹಿತನಾದ, ಸಾಮಾನ್ಯಜನರಿಗೆ ಹಾಸ್ಯಾಸ್ಪದವಾದ ವೇಷಭೂಷಣಗಳುಳ್ಳವನಾದ, ಶಿವನನ್ನು ಹೃದಯದಲ್ಲಿ ಭಜಿಸುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಹಸ್ರಂ ವರ್ತಂತೇ ಜಗತಿ ವಿಬುಧಾಃ ಕ್ಷುದ್ರಫಲದಾ
ನ ಮನ್ಯೇ ಸ್ವಪ್ನೇ ವಾ ತದನುಸರಣಂ ತತ್ಕೃತಫಲಮ್ ।
ಹರಿಬ್ರಹ್ಮಾದೀನಾಮಪಿ ನಿಕಟಭಾಜಾಮಸುಲಭಂ
ಚಿರಂ ಯಾಚೇ ಶಂಭೋ ಶಿವ ತವ ಪದಾಂಭೋಜಭಜನಮ್ ॥ ೪ ॥

೪. ಹೇ ಶಂಭು, ಜಗತ್ತಿನಲ್ಲಿ ಕ್ಷುದ್ರಫಲಗಳನ್ನು ಕೊಡಬಲ್ಲ ದೇವತೆಗಳು ಸಹಸ್ರಾರು ಮಂದಿ ಇರುವರು. ಅವರ ಅನುಸರಣವನ್ನಾಗಲೀ, ಅವರು ಕೊಡಬಲ್ಲ ಫಲಗಳನ್ನಾಗಲೀ, ಕುರಿತು ನಾನು ಸ್ವಪ್ನದಲ್ಲಿಯೂ ಚಿಂತಿಸಿಲ್ಲ. ಹೇ ಶಿವ, ನಿನ್ನ ಸಮೀಪದಲ್ಲಿರುವ ಹರಿಬ್ರಹ್ಮ ಮೊದಲಾದವರಿಗೂ ಸುಲಭವಲ್ಲದ ನಿನ್ನ ಪಾದ ಕಮಲದ ಸೇವೆಯನ್ನು ಸದಾ ಯಾಚಿಸುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ಮೃತೌ ಶಾಸ್ತ್ರೇ ವೈದ್ಯೇ ಶಕುನಕವಿತಾಗಾನಫಣಿತೌ
ಪುರಾಣೇ ಮಂತ್ರೇ ವಾ ಸ್ತುತಿನಟನಹಾಸ್ಯೇಷ್ವಚತುರಃ ।
ಕಥಂ ರಾಜ್ಞಾಂ ಪ್ರೀತಿರ್ಭವತಿ ಮಯಿ ಕೋಽಹಂ ಪಶುಪತೇ
ಪಶುಂ ಮಾಂ ಸರ್ವಜ್ಞ ಪ್ರಥಿತಕೃಪಯಾ ಪಾಲಯ ವಿಭೋ ॥ ೫॥

೫. ಸ್ಮೃತಿ, ಶಾಸ್ತ್ರ, ವೈದ್ಯ, ಶಕುನ, ಕವಿತೆ, ಗಾನಕ್ಕೆ ಯೋಗ್ಯವಾದ ಹಾಡು, ಪುರಾಣ, ಮಂತ್ರ ಸ್ತುತಿ, ನಟನೆ, ಹಾಸ್ಯ-ಇವಾವುದರಲ್ಲಿಯೂ ನಾನು ಚತುರನಲ್ಲ. (ಆದುದರಿಂದ) ನನ್ನಲ್ಲಿ ರಾಜರಿಗೆ ಹೇಗೆ ತಾನೇ ಪ್ರೀತಿಯುಂಟಾದೀತು? ನಾನಾರು? ಪಶುಪತಿಯೇ, ಸರ್ವಜ್ಞನೇ, ವಿಭುವೇ, ಪಶುಪ್ರಾಯನಾದ ನನ್ನನ್ನು ಪ್ರಸಿದ್ಧವಾಗಿರುವ ನಿನ್ನ ಕೃಪೆಯಿಂದ ಕಾಪಾಡು!

Sri Vidyabharathi Book Centre, Sringeri

CC-O. In Public Domain. Digitized by eGangotri

ಘಟೋ ವಾ ಮೃತ್ಪಿಂಡೋಽಪ್ಯಣುರಪಿ ಚ ಧೂಮೋಽಗ್ನಿರಚಲಃ
ಪಟೋ ವಾ ತಂತುರ್ವಾ ಪರಿಹರತಿ ಕಿಂ ಘೋರಶಮನಮ್ ।
ವೃಥಾ ಕಂಠಕ್ಷೋಭಂ ವಹಸಿ ತರಸಾ ತರ್ಕವಚಸಾ
ಪದಾಂಭೋಜಂ ಶಂಭೋರ್ಭಜ ಪರಮಸೌಖ್ಯಂ ವ್ರಜ ಸುಧೀಃ ॥ ೬ ॥

೬. ಹೇ (ತರ್ಕಶಾಸ್ತ್ರನಿಪುಣನಾದ) ವಿದ್ವಾಂಸನೇ, ಘೋರನಾದ ಯಮನನ್ನು ಮಡಕೆಯಾಗಲೀ, ಮಣ್ಣಿನ ಮುದ್ದೆಯಾಗಲೀ, ಪರಮಾಣುವಾಗಲೀ, ಹೊಗೆಯಾಗಲೀ, ಬೆಂಕಿಯಾಗಲೀ, ಬೆಟ್ಟವಾಗಲೀ, ಬಟ್ಟೆಯಾಗಲೀ, ನೂಲಾಗಲೀ, ಪರಿಹರಿಸಲಾರದು. ಇಂತಹ ತರ್ಕಶಾಸ್ತ್ರದ ಮಾತುಗಳಿಂದ ವ್ಯರ್ಥವಾಗಿ ಕಂಠಕ್ಷೋಭವನ್ನು ಮಾಡಿಕೊಳ್ಳುತ್ತಿದ್ದೀಯೆ. (ಅವನ್ನು ಬಿಟ್ಟು) ಶೀಘ್ರವಾಗಿ ಶಂಭುವಿನ ಪದಕಮಲವನ್ನು ಭಜಿಸು; ಪರಮಸೌಖ್ಯವನ್ನು ಹೊಂದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮನಸ್ತೇ ಪಾದಾಬ್ಜೇ ನಿವಸತು ವಚಃ ಸ್ತೋತ್ರಫಣಿತೌ
ಕರೌ ಚಾಭ್ಯರ್ಚಾಯಾಂ ಶ್ರುತಿರಪಿ ಕಥಾಕರ್ಣನವಿಧೌ ।
ತವ ಧ್ಯಾನೇ ಬುದ್ಧಿರ್ನಯನಯುಗಲಂ ಮೂರ್ತಿವಿಭವೇ
ಪರಗ್ರಂಥಾನ್ ಕೈರ್ವಾ ಪರಮಶಿವ ಜಾನೇ ಪರಮತಃ ॥ ೭ ॥

೭. ಹೇ ಪರಮಶಿವ, ನನ್ನ ಮನಸ್ಸು ನಿನ್ನ ಪಾದಕಮಲದಲ್ಲಿ ವಾಸಿಸಲಿ, ಬಾಯಿ ನಿನ್ನ ಸ್ತೋತ್ರಪಾಠದಲ್ಲಿ ನಿರತವಾಗಲಿ. ಕೈಗಳು ನಿನ್ನ ಅರ್ಚನೆಯಲ್ಲಿ ನಿರತವಾಗಲಿ. ಕಿವಿಗಳು ನಿನ್ನ ಕಥೆಯನ್ನು ಕೇಳಲಿ. ಬುದ್ಧಿಯು ನಿನ್ನ ಧ್ಯಾನದಲ್ಲಿ ನೆಲಸಲಿ. ಕಣ್ಣುಗಳು ನಿನ್ನ ಮೂರ್ತಿಯನ್ನು ವೀಕ್ಷಿಸುವುದರಲ್ಲಿ ನೆಲಸಲಿ. (ಹೀಗೆ ನನ್ನ ಸಕಲೇಂದ್ರಿಯಗಳೂ ನಿನ್ನಲ್ಲಿ ನಿರತವಾಗಿರುವುದರಿಂದ) ಇನ್ನು ಮುಂದೆ ಇತರ ದೇವತೆಗಳ ಮಹಿಮೆಯನ್ನು ವರ್ಣಿಸುವ ಗ್ರಂಥಗಳನ್ನು ಯಾವ ಇಂದ್ರಿಯದಿಂದ ತಾನೇ ತಿಳಿಯಲಿ?

Sri Vidyabharathi Book Centre, Sringeri

CC-O. In Public Domain. Digitized by eGangotri

ಯಥಾಬುದ್ಧಿಶ್ಶುಕ್ತೌ ರಜತಮಿತಿ ಕಾಚಾಶ್ಮನಿ ಮಣಿ-
ರ್ಜಲೇ ಪೈಷ್ಟೇ ಕ್ಷೀರಂ ಭವತಿ ಮೃಗತೃಷ್ಣಾಸು ಸಲಿಲಮ್ ।
ತಥಾ ದೇವಭ್ರಾಂತ್ಯಾ ಭಜತಿ ಭವದನ್ಯಂ ಜಡಜನೋ
ಮಹಾದೇವೇಶಂ ತ್ವಾಂ ಮನಸಿ ಚ ನ ಮತ್ವಾ ಪಶುಪತೇ ॥ ೮॥

೮. ಹೇ ಮಹಾದೇವ, ಮುತ್ತಿನ ಚಿಪ್ಪಿನಲ್ಲಿ ಬೆಳ್ಳಿ ಎಂಬ ಬುದ್ಧಿ, ಗಾಜಿನಲ್ಲಿ ಮಣಿ ಎಂಬ ಬುದ್ಧಿ, ಹಿಟ್ಟು ಕಲಸಿರುವ ನೀರಿನಲ್ಲಿ ಹಾಲು ಎಂಬ ಬುದ್ಧಿ, ಬಿಸಿಲ್ಗು ದುರೆಯಲ್ಲಿ ನೀರು ಎಂಬ ಬುದ್ಧಿ,- ಇವು ಹೇಗೆ ಭ್ರಾಂತಿಯಿಂದ ಉಂಟಾಗು ತ್ತವೆಯೋ ಹಾಗೆಯೇ, ಎಲೈ ಪಶುಪತಿಯೇ, ಜಡರಾದ ಜನರು ಈಶನಾದ ನಿನ್ನನ್ನು ಮನಸ್ಸಿನಲ್ಲಿ ನೆನೆಯದೆ ನಿನಗಿಂತ ಬೇರೆಯಾದ ವಸ್ತುವನ್ನು ದೇವರೆಂಬ ಭ್ರಾಂತಿ ಯಿಂದ ಭಜಿಸುತ್ತಿರುವರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಗಭೀರೇ ಕಾಸಾರೇ ವಿಶತಿ ವಿಜನೇ ಘೋರವಿಪಿನೇ
ವಿಶಾಲೇ ಶೈಲೇ ಚ ಭ್ರಮತಿ ಕುಸುಮಾರ್ಥಂ ಜಡಮತಿಃ ।
ಸಮರ್ಪ್ಯೈಕಂ ಚೇತಸ್ಸರಸಿಜಮುಮಾನಾಥ ಭವತೇ
ಸುಖೇನೈವ ಸ್ಥಾತುಂ ಜನ ಇಹ ನ ಜಾನಾತಿ ಕಿಮಹೋ ॥ ೯ ॥

೯. ಎಲ್ಲೆ ಉಮಾನಾಥನೇ, ಜಡಬುದ್ಧಿಯುಳ್ಳವನು ಆಳವಾದ ಕೊಳವನ್ನು (ಕಮಲಕ್ಕಾಗಿ) ಪ್ರವೇಶಿಸುತ್ತಾನೆ; (ಬೆಟ್ಟದಾವರೆಯೇ ಮೊದಲಾದ) ಹೂವಿಗಾಗಿ ನಿರ್ಜನವೂ ಭಯಂಕರವೂ ಆದ ಕಾಡಿನಲ್ಲಿಯೂ ವಿಸ್ತಾರವಾದ ಪರ್ವತದಲ್ಲಿಯೂ ಅಲೆಯುತ್ತಾನೆ. ಮನಸ್ಸೆಂಬ ಕಮಲವೊಂದನ್ನೇ ನಿನಗೆ ಸಮರ್ಪಿಸಿ ಇಲ್ಲಿಯೇ ಸುಖದಿಂದಿರುವುದನ್ನು ಜನರು ಅರಿಯುವುದಿಲ್ಲವಲ್ಲ! ಏನಾಶ್ಚರ್ಯ!

CC-O. In Public Domain. Digitized by eGangotri

ನರತ್ವಂ ದೇವತ್ವಂ ನಗವನಮೃಗತ್ವಂ ಮಶಕತಾ
ಪಶುತ್ವಂ ಕೀಟತ್ವಂ ಭವತು ವಿಹಗತ್ವಾದಿಜನನಮ್ ।
ಸದಾ ತ್ವತ್ಪಾದಾಬ್ಜಸ್ಮರಣಪರಮಾನಂದಲಹರೀ-
ವಿಹಾರಾಸಕ್ತಂ ಚೇದ್ಧೃದಯಮಿಹ ಕಿಂ ತೇನ ವಪುಷಾ ॥ ೧೦ ॥

೧೦. ನರತ್ವವಾಗಲೀ, ದೇವತ್ವವಾಗಲೀ, ಬೆಟ್ಟದ ಅಥವಾ ಕಾಡಿನ ಮೃಗದ ಜನ್ಮವಾಗಲೀ, ಸೊಳ್ಳೆಯ ಜನ್ಮವಾಗಲೀ, ಪಶುತ್ವವಾಗಲೀ, ಕೀಟತ್ವವಾಗಲೀ, ಹಕ್ಕಿಯ ಜನ್ಮವೇ ಮೊದಲಾದ ಯಾವ ಜನ್ಮವಾದರೂ ಪ್ರಾಪ್ತವಾಗಲೀ; ಯಾವಾಗಲೂ ನನ್ನ ಹೃದಯವು ನಿನ್ನ ಪಾದಕಮಲದ ಸ್ಮರಣೆಯಿಂದ ಉಂಟಾಗುವ ಪರಮಾನಂದಲಹರಿಯಲ್ಲಿ ವಿಹರಿಸಲು ಆಸ್ತಕವಾಗಿದ್ದರೆ ಈ ಲೋಕದಲ್ಲಿ ಆಯಾ ಶರೀರದಿಂದೇನಾದೀತು?

CC-O. In Public Domain. Digitized by eGangotri

ವಟುರ್ವಾ ಗೇಹೀ ವಾ ಯತಿರಪಿ ಜಟೀ ವಾ ತದಿತರೋ
ನರೋ ವಾ ಯಃ ಕಶ್ಚಿದ್ಭವತು ಭವ ಕಿಂ ತೇನ ಭವತಿ ।
ಯದೀಯಂ ಹೃತ್ಪದ್ಮಂ ಯದಿ ಭವದಧೀನಂ ಪಶುಪತೇ
ತದೀಯಸ್ತ್ವಂ ಶಂಭೋ ಭವಸಿ ಭವಭಾರಂ ಚ ವಹಸಿ ॥ ೧೧ ॥

೧೧. ಎಲೈ ಭವ, ಒಬ್ಬನು ಬ್ರಹ್ಮಚಾರಿಯಾಗಿರಲೀ, ಗೃಹಸ್ಥನಾಗಿರಲೀ, ಜಟಾಧಾರಿಯಾದ ವಾನಪ್ರಸ್ಥನಾಗಿರಲೀ, ಸಂನ್ಯಾಸಿಯಾಗಿರಲೀ ಅಥವಾ ಇವರಿಗಿಂತ ಬೇರೆ ರೀತಿಯ ಮನುಷ್ಯನಾಗಿರಲೀ-ಅದರಿಂದೇನಾದೀತು? ಹೇ ಪಶುಪತಿ, ಅವನ ಹೃತ್ಪದ್ಮವು ನಿನ್ನ ಅಧೀನವಾದರೆ ನೀನು ಅವನಿಗೆ ಸೇರಿದವನಾಗುವೆ. ಶಂಭುವೇ, ಅವನ ಸಂಸಾರಭಾರವನ್ನೂ ನೀನೇ ವಹಿಸಿಕೊಳ್ಳುತ್ತೀಯೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಗುಹಾಯಾಂ ಗೇಹೇ ವಾ ಬಹಿರಪಿ ವನೇ ವಾऽದ್ರಿಶಿಖರೇ
ಜಲೇ ವಾ ವಹ್ನೌ ವಾ ವಸತು ವಸತೇಃ ಕಿಂ ವದ ಫಲಮ್ ।
ಸದಾ ಯಸ್ಯೈವಾಂತಃಕರಣಮಪಿ ಶಂಭೋ ತವ ಪದೇ
ಸ್ಥಿತಂ ಚೇದ್ಯೋಗೋऽಸೌ ಸ ಚ ಪರಮಯೋಗೀ ಸ ಚ ಸುಖೀ ॥ ೧೨ ॥

೧೨. ಹೇ ಶಂಭು, (ಒಬ್ಬನು) ಗುಹೆಯಲ್ಲಿ, ಮನೆಯಲ್ಲಿ ಅಥವಾ ಹೊರಗೆ, ಕಾಡಿನಲ್ಲಿ ಅಥವಾ ಬೆಟ್ಟದ ಶಿಖರದಲ್ಲಿ ಅಥವಾ ನೀರಿನಲ್ಲಿ ಅಥವಾ ಬೆಂಕಿಯಲ್ಲಿ ವಾಸಮಾಡಬಹುದು; ಅದರೆ ಇಂಥ ವಾಸದಿಂದೇನು ಫಲ? ಅವನ ಅಂತಃಕರಣವೂ ಸಹ ನಿನ್ನ ಪಾದದಲ್ಲಿ ಯಾವಾಗಲೂ ನೆಲಸಿರುವುದಾದರೆ ಅದೇ ಯೋಗ; ಅವನೇ ಪರಮಯೋಗಿ ಮತ್ತು ಅವನೇ ಸುಖಿ.

CC-O. In Public Domain. Digitized by eGangotri

ಅಸಾರೇ ಸಂಸಾರೇ ನಿಜಭಜನದೂರೇ ಜಡಧಿಯಾ
ಭ್ರಮಂತಂ ಮಾಮಂಧಂ ಪರಮಕೃಪಯಾ ಪಾತುಮುಚಿತಮ್ ।
ಮದನ್ಯಃ ಕೋ ದೀನಸ್ತವ ಕೃಪಣರಕ್ಷಾತಿನಿಪುಣ-
ಸ್ತ್ವದನ್ಯಃ ಕೋ ವಾ ಮೇ ತ್ರಿಜಗತಿ ಶರಣ್ಯಃ ಪಶುಪತೇ ॥ ೧೩ ॥

೧೩. ಎಲ್ಲೆ ಪಶುಪತಿಯೇ, ಸಾರವಿಲ್ಲದ ಮತ್ತು ನಿನ್ನ ಭಜನೆಯಿಂದ ದೂರವಾದ ಈ ಸಂಸಾರದಲ್ಲಿ ಜಡಬುದ್ಧಿಯಿಂದ ಕೂಡಿ, (ಜ್ಞಾನಚಕ್ಷುಸ್ಸಿಲ್ಲದೆ) ಅಂಧನಾಗಿ ಅಲೆಯುತ್ತಿರುವ ನನ್ನನ್ನು (ನೀನು) ಅತ್ಯಂತ ಕೃಪೆಯಿಂದ ಕಾಪಾಡುವುದು ಯೋಗ್ಯವು. ನನಗಿಂತ ದೀನನಾದವನು ನಿನಗೆ ಯಾವನು ಸಿಕ್ಕುತ್ತಾನೆ? ಮೂರು ಲೋಕದಲ್ಲಿಯೂ, ದೀನರನ್ನು ರಕ್ಷಿಸುವುದರಲ್ಲಿ ಅತೀ ನಿಪುಣನಾದ ನಿನಗಿಂತ ಬೇರಾವನು ಶರಣುಹೊಂದಲು ನನಗೆ ಸಿಕ್ಕುವನು?

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಭುಸ್ತ್ವಂ ದೀನಾನಾಂ ಖಲು ಪರಮಬಂಧುಃ ಪಶುಪತೇ
ಪ್ರಮುಖ್ಯೋಽಹಂ ತೇಷಾಮಪಿ ಕಿಮುತ ಬಂಧುತ್ವಮನಯೋಃ ।
ತ್ವಯೈವ ಕ್ಷಂತವ್ಯಾಃ ಶಿವ ಮದಪರಾಧಾಶ್ಚ ಸಕಲಾಃ
ಪ್ರಯತ್ನಾತ್ಕರ್ತವ್ಯಂ ಮದವನಮಿಯಂ ಬಂಧುಸರಣಿಃ ॥೧೪॥

೧೪. ಎಲೈ ಪಶುಪತಿ, ಪ್ರಭುವಾದ ನೀನು ದೀನರಿಗೆಲ್ಲಾ ಪರಮಬಂಧುವಲ್ಲವೆ? ಆ ದೀನರಲ್ಲಿಯೂ ಅತಿ ಮುಖ್ಯನಾದವನು ನಾನು. ಹೀಗಿರಲು ನಮ್ಮಿಬ್ಬರ ಬಾಂಧವ್ಯದ ವಿಷಯದಲ್ಲಿ ಹೇಳತಕ್ಕದ್ದೇನಿದೆ? ಶಿವನೇ, ನನ್ನ ಎಲ್ಲ ಅಪರಾಧಗಳನ್ನೂ ನೀನೇ ಕ್ಷಮಿಸಬೇಕು; ನನ್ನ ರಕ್ಷಣೆಯನ್ನು ಪ್ರಯತ್ನಪೂರ್ವಕವಾಗಿ ಮಾಡಬೇಕು. ಇದು ಬಂಧುಗಳು ಅನುಸರಿಸಬೇಕಾದ ಮಾರ್ಗ.

Sri Vidyabharathi Book Centre, Sringeri

CC-O. In Public Domain. Digitized by eGangotri

ಉಪೇಕ್ಷಾ ನೋ ಚೇತ್ಕಿಂ ನ ಹರಸಿ ಭವದ್ಧ್ಯಾನವಿಮುಖಾಂ
ದುರಾಶಾಭೂಯಿಷ್ಠಾಂ ವಿಧಿಲಿಪಿಮಶಕ್ತೋ ಯದಿ ಭವಾನ್ ।
ಶಿರಸ್ತದ್ಧೈಧಾತ್ರಂ ನ ನ ಖಲು ಸುವೃತ್ತಂ ಪಶುಪತೇ
ಕಥಂ ವಾ ನಿರ್ಯತ್ನಂ ಕರನಖಮುಖೇನೈವ ಲುಲಿತಮ್ ॥ ೧೫ ॥

೧೫. ಹೇ ಪಶುಪತಿ, ನಿನಗೆ ಉಪೇಕ್ಷೆಯಿಲ್ಲದಿದ್ದ ಪಕ್ಷದಲ್ಲಿ (ನಾನು) ನಿನ್ನ ಧ್ಯಾನದಿಂದ ವಿಮುಖನಾಗುವಂತೆ ಮಾಡಿರುವ ಮತ್ತು ಬಹು ದುರಾಶೆಯಿಂದ ಕೂಡಿರುವಂತೆ ಮಾಡಿರುವ (ನನ್ನ) ಹಣೆಯ ಬರಹವನ್ನೇಕೆ ಹೋಗಲಾಡಿಸುವುದಿಲ್ಲ? (ಈ ವಿಷಯದಲ್ಲಿ) ನೀನು ಅಶಕ್ತನಾಗಿದ್ದಿದ್ದರೆ ಬ್ರಹ್ಮನ ಆ ದುಂಡುತಲೆಯನ್ನು ನಿನ್ನ ಕೈಯುಗಿರಿನಿಂದಲೇ ಅಪ್ರಯತ್ನವಾಗಿಯೇ ಹೇಗೆ ಕತ್ತರಿಸಿದೆ?

Sri Vidyabharathi Book Centre, Sringeri

CC-O. In Public Domain. Digitized by eGangotri

ವಿರಿಂಚಿರ್ದೀರ್ಘಾಯುರ್ಭವತು ಭವತಾ ತತ್ಪರಶಿರ-
ಶ್ಚತುಷ್ಕಂ ಸಂರಕ್ಷ್ಯಂ ಸ ಖಲು ಭುವಿ ದೈನ್ಯಂ ಲಿಖಿತವಾನ್ ।
ವಿಚಾರಃ ಕೋ ವಾ ಮಾಂ ವಿಶದಕೃಪಯಾ ಪಾತಿ ಶಿವ ತೇ
ಕಟಾಕ್ಷವ್ಯಾಪಾರಃ ಸ್ವಯಮಪಿ ಚ ದೀನಾವನಪರಃ ॥ ೧೬ ॥

೧೬. ಬ್ರಹ್ಮನು ದೀರ್ಘಾಯುವಾಗಲಿ! ಹೇ ಶಿವ, ಅವನ (ಉಳಿದ) ನಾಲ್ಕು ತಲೆಗಳನ್ನು ನೀನು ಸಂರಕ್ಷಿಸಬೇಕು! ಅವನೇ ಅಲ್ಲವೆ ಈ ಭೂಲೋಕದಲ್ಲಿ ದೈನ್ಯವನ್ನು ಬರೆದವನು? ತಾನಾಗಿಯೇ ದೀನರನ್ನು ರಕ್ಷಿಸುವುದರಲ್ಲಿ ಪ್ರವೃತ್ತವಾಗಿರುವ ನಿನ್ನ ಕಟಾಕ್ಷವ್ಯಾಪಾರವು ಶುದ್ಧಕೃಪೆಯಿಂದಲೇ ನನ್ನನ್ನು ಕಾಪಾಡುವುದು. (ಈ ವಿಷಯದಲ್ಲಿ) ವಿಚಾರಿಸತಕ್ಕದ್ದೇನಿದೆ?

Sri Vidyabharathi Book Centre, Sringeri

CC-O. In Public Domain. Digitized by eGangotri

ಫಲಾದ್ವಾ ಪುಣ್ಯಾನಾಂ ಮಯಿ ಕರುಣಯಾ ವಾ ತ್ವಯಿ ವಿಭೋ
ಪ್ರಸನ್ನೇಽಪಿ ಸ್ವಾಮಿನ್ ಭವದಮಲಪಾದಾಬ್ಜಯುಗಲಮ್ ।
ಕಥಂ ಪಶ್ಯೇಯಂ ಮಾಂ ಸ್ಥಗಯತಿ ನಮಸ್ಸಂಭ್ರಮಜುಷಾಂ
ನಿಲಿಂಪಾನಾಂ ಶ್ರೇಣಿರ್ನಿಜಕನಕಮಾಣಿಕ್ಯಮಕುಟೈಃ ॥ ೧೭ ॥

೧೭. ಎಲೈ ಸರ್ವವ್ಯಾಪಿಯೇ, (ಇದುವರೆಗೆ ಪ್ರಸನ್ನನಾಗದಿರುವ ನೀನು ನನ್ನ ಪೂರ್ವಜನ್ಮಗಳ) ಸುಕೃತಗಳ ಫಲವಾಗಿಯೋ ಅಥವಾ ನಿನಗೆ ನನ್ನಲ್ಲುಂಟಾದ ಕರುಣೆಯಿಂದಲೋ ನನಗೆ ಪ್ರಸನ್ನನಾದರೂ ನಿನ್ನ ವಿಮಲ ಪಾದಪದ್ಮಗಳನ್ನು ನಾನು ಹೇಗೆ ತಾನೇ ನೋಡಬಲ್ಲೆನು? (ಏಕೆಂದರೆ) ನಿನ್ನನ್ನು ನಮಸ್ಕರಿಸುವುದಕ್ಕಾಗಿ ಸಂಭ್ರಮಪಡುತ್ತಿರುವ ದೇವತೆಗಳ ಸಾಲು ತನ್ನ ಕನಕ-ರತ್ನ-ಕಿರೀಟಗಳಿಂದ ನನ್ನನ್ನು ಅಡ್ಡಿಪಡಿಸುತ್ತಿದೆ!

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ವಮೇಕೋ ಲೋಕಾನಾಂ ಪರಮಫಲದೋ ದಿವ್ಯಪದವೀಂ
ವಹಂತಸ್ತ್ವನ್ಮೂಲಾಂ ಪುನರಪಿ ಭಜಂತೇ ಹರಿಮುಖಾಃ ।
ಕಿಯದ್ವಾ ದಾಕ್ಷಿಣ್ಯಂ ತವ ಶಿವ ಮದಾಶಾ ಚ ಕಿಯತೀ
ಕದಾ ವಾ ಮದ್ರಕ್ಷಾಂ ವಹಸಿ ಕರುಣಾಪೂರಿತದೃಶಾ ॥ ೧೮ ॥

೧೮. ಹೇ ಶಿವ, ಲೋಕಗಳಿಗೆ ಪರಮಫಲವನ್ನು ಕೊಡುವವನು ನೀನೊಬ್ಬನೇ. ನಿನ್ನಿಂದ ಕೊಡಲ್ಪಟ್ಟ ದಿವ್ಯಪದವಿಗಳನ್ನು ವಹಿಸಿಕೊಂಡಿರುವ ವಿಷ್ಣುವೇ ಮೊದಲಾದವರು ಪುನಃ ನಿನ್ನನ್ನೇ ಸೇವಿಸುತ್ತಿರುವರು. ನಿನ್ನ ದಾಕ್ಷಿಣ್ಯವೆಷ್ಟು? ಮತ್ತು ನನ್ನ ಆಶೆಯೆಷ್ಟು? ಕರುಣಾಪೂರಿತ-ದೃಷ್ಟಿಯಿಂದ ನನ್ನ ರಕ್ಷಣೆಯನ್ನು ಯಾವಾಗ ವಹಿಸಿಕೊಳ್ಳುವೆ?

Sri Vidyabharathi Book Centre, Sringeri

CC-O. In Public Domain. Digitized by eGangotri

ದುರಾಶಾಭೂಯಿಷ್ಠೇ ದುರಧಿಪಗೃಹದ್ವಾರಘಟಕೇ
ದುರಂತೇ ಸಂಸಾರೇ ದುರಿತನಿಲಯೇ ದುಃಖಜನಕೇ ।
ಮದಾಯಾಸಂ ಕಿಂ ನ ವ್ಯಪನಯಸಿ ಕಸ್ಯೋಪಕೃತಯೇ
ವದೇಯಂ ಪ್ರೀತಿಶ್ಚೇತ್ತವ ಶಿವ ಕೃತಾರ್ಥಾಃ ಖಲು ವಯಮ್ ॥ ೧೯ ॥

೧೯. ಹೇ ಶಿವನೇ, ದುರಾಶೆಯಿಂದ ತುಂಬಿರುವ, ದುಷ್ಟರಾದ ಪ್ರಭುಗಳ ಮನೆಯ ಬಾಗಿಲಿನಲ್ಲಿ ಕಾಯುವಂತೆ ಮಾಡುವ, ದುರಂತವೂ ದುರಿತಗಳಿಗೆ ನಿಲಯವೂ ದುಃಖಜನಕವೂ ಆದ ಸಂಸಾರದಲ್ಲಿ ನಾನು ಪಡುತ್ತಿರುವ ಶ್ರಮವನ್ನು ಏಕೆ ನೀನು ಹೋಗಲಾಡಿಸುವುದಿಲ್ಲ? ಯಾರ ಉಪಕಾರಕ್ಕಾಗಿ (ಹೀಗೆ ಮಾಡುತ್ತಿರುವೆ) ಹೇಳು? ಇದರಿಂದ ನಿನಗೆ ಪ್ರೀತಿಯುಂಟಾದರೆ ನಾವು ಕೃತಾರ್ಥರೇ ಸರಿ!

Sri Vidyabharathi Book Centre, Sringeri

CC-O. In Public Domain. Digitized by eGangotri

ಸದಾ ಮೋಹಾಟವ್ಯಾಂ ಚರತಿ ಯುವತೀನಾಂ ಕುಚಗಿರೌ
ನಟತ್ಯಾಶಾಶಾಖಾಸ್ವಟತಿ ಝಟಿತಿ ಸ್ವೈರಮಭಿತಃ ।
ಕಪಾಲಿನ್ ಭಿಕ್ಷೋ ಮೇ ಹೃದಯಕಪಿಮತ್ಯಂತಚಪಲಂ
ದೃಢಂ ಭಕ್ತ್ಯಾ ಬದ್ಧ್ವಾ ಶಿವ ಭವದಧೀನಂ ಕುರು ವಿಭೋ ॥ ೨೦ ॥

೨೦. ಹೇ ಕಪಾಲಧಾರಿಯಾದ ಭಿಕ್ಷು, ನನ್ನ ಮನಸ್ಸೆಂಬ ಕಪಿಯು ಯಾವಾಗಲೂ ಮೋಹವೆಂಬ ಅಡವಿಯಲ್ಲಿ ಸಂಚರಿಸುತ್ತಿದೆ. ಯುವತಿಯರ ಕುಚಗಿರಿಯಲ್ಲಿ ನರ್ತಿಸುತ್ತಿದೆ. ಆಶೆಗಳೆಂಬ ಕೊಂಬೆಗಳಲ್ಲಿ ಇಷ್ಟಬಂದಂತೆ ಎಲ್ಲ ಕಡೆಯಿಂದಲೂ ಬೇಗ ಬೇಗ ನೆಗೆದಾಡುತ್ತಿದೆ. ಹೇ ಶಿವ, ವಿಭುವೇ, ಅತ್ಯಂತ ಚಪಲವಾದ ಈ ಕಪಿಯನ್ನು ಭಕ್ತಿಯೆಂಬ ಹಗ್ಗದಿಂದ ಬಲವಾಗಿ ಕಟ್ಟಿ ನಿನ್ನ ವಶ ಮಾಡಿಕೊ.

Sri Vidyabharathi Book Centre, Sringeri

CC-O. In Public Domain. Digitized by eGangotri

ಧೃತಿಸ್ತಂಭಾಧಾರಾಂ ದೃಢಗುಣನಿಬದ್ಧಾಂ ಸಗಮನಾಂ
ವಿಚಿತ್ರಾಂ ಪದ್ಮಾಢ್ಯಾಂ ಪ್ರತಿದಿವಸಸನ್ಮಾರ್ಗಘಟಿತಾಮ್ ।
ಸ್ಮರಾರೇ ಮಚ್ಚೇತಃಸ್ಫುಟಪಟಕುಟೀಂ ಪ್ರಾಪ್ಯ ವಿಶದಾಂ
ಜಯ ಸ್ವಾಮಿನ್ ಶಕ್ತ್ಯಾ ಸಹ ಶಿವಗಣೈಸ್ಸೇವಿತ ವಿಭೋ ॥ ೨೧ ॥

೨೧. ಹೇ ಮನ್ಮಥನ ಶತ್ರುವೇ, ಧೈರ್ಯವೆಂಬ ಸ್ತಂಭಗಳನ್ನೇ ಆಧಾರವಾಗಿ ಉಳ್ಳ, ಅಚಲವಾದ (ಭಕ್ತಿ-ವೈರಾಗ್ಯಾದಿ) ಗುಣಗಳೆಂಬ ಗಟ್ಟಿಯಾದ ಹಗ್ಗಗಳಿಂದ ಕಟ್ಟಲ್ಪಟ್ಟ, ಗಮನಶೀಲವಾದ, ಪದ್ಮಾಕಾರದ ಚಿತ್ರಗಳಿಂದ ತುಂಬಿರುವ, ಪ್ರತಿದಿನವೂ ನಾನು ನಡೆಯುತ್ತಿರುವ ಸಜ್ಜನರ ಪದ್ಧತಿಯೆಂಬ ಒಳ್ಳೆಯ ಮಾರ್ಗದಿಂದ ಕೂಡಿದ, ನನ್ನ ಮನಸ್ಸೆಂಬ ಶ್ವೇತವಸ್ತ್ರದ ಶುಭ್ರವಾದ ಡೇರೆಯನ್ನು ಬಂದು ಸೇರಿ, ಎಲ್ಲೆ ನನ್ನ ಸ್ವಾಮಿಯಾದ ಶಿವನೇ, ಪ್ರಭುವೇ, ಪ್ರಮಥಗಣಗಳಿಂದ ಸೇವಿತನಾದ ವನೇ, ಶಕ್ತಿದೇವಿಯೊಡನೆ ಅಲ್ಲಿ ನೀನು ನೆಲಸಿ ಸರ್ವೋತ್ಕರ್ಷದಿಂದ ವಿರಾಜಿಸು.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಲೋಭಾದ್ಯೈರರ್ಥಾಹರಣಪರತಂತ್ರೋ ಧನಿಗೃಹೇ
ಪ್ರವೇಶೋದ್ಯುಕ್ತಸ್ಸನ್ ಭ್ರಮತಿ ಬಹುಧಾ ತಸ್ಕರಪತೇ ।
ಇಮಂ ಚೇತಶ್ಚೋರಂ ಕಥಮಿಹ ಸಹೇ ಶಂಕರ ವಿಭೋ
ತವಾಧೀನಂ ಕೃತ್ವಾ ಮಯಿ ನಿರಪರಾಧೇ ಕುರು ಕೃಪಾಮ್ ॥ ೨೨ ॥

೨೨. ಕಳ್ಳರಿಗೆ ಒಡೆಯನಾದವನೇ, ಹೇ ಶಂಕರ, ವಿಭುವೇ, ಈ ಮನಸ್ಸೆಂಬ ಕಳ್ಳನು ಅತ್ಯಾಶೆಯೇ ಮೊದಲಾದ ದುರ್ಗುಣಗಳಿಂದ ಪ್ರೇರಿತನಾಗಿ ಪರಧನವನ್ನು ಕದಿಯುವುದರಲ್ಲಿ ಆಸಕ್ತನಾಗಿ ಧನಿಕರ ಮನೆಯೊಳಕ್ಕೆ ಪ್ರವೇಶಿಸಲು ಉದ್ಯುಕ್ತನಾಗಿ ಅಲೆಯುತ್ತಿದ್ದಾನೆ. ಇವನನ್ನು ಹೇಗೆ ತಾನೆ ಸಹಿಸಲಿ? ಇವನನ್ನು ನಿನ್ನ ವಶಮಾಡಿ ಕೊಂಡು ನಿರಪರಾಧಿಯಾದ ನನ್ನಲ್ಲಿ ಕೃಪೆಯನ್ನು ಮಾಡು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕರೋಮಿ ತ್ವತ್ಪೂಜಾಂ ಸಪದಿ ಸುಖಿದೋ ಮೇ ಭವ ವಿಭೋ
ವಿಧಿತ್ವಂ ವಿಷ್ಣುತ್ವಂ ದಿಶಸಿ ಖಲು ತಸ್ಯಾಃ ಫಲಮಿತಿ ।
ಪುನಶ್ಚ ತ್ವಾಂ ದ್ರಷ್ಟುಂ ದಿವಿ ಭುವಿ ವಹನ್ ಪಕ್ಷಿಮೃಗತಾ-
ಮದೃಷ್ಟ್ವಾ ತತ್ಖೇದಂ ಕಥಮಿಹ ಸಹೇ ಶಂಕರ ವಿಭೋ ॥ ೨೩ ॥

೨೩. ವಿಭುವೇ, ಶಂಕರನೇ, ನಿನ್ನ ಪೂಜೆಯನ್ನು ಮಾಡುತ್ತೇನೆ. ನನಗೆ ಕೂಡಲೇ (ಕೈವಲ್ಯ) ಸುಖವನ್ನು ಕೊಡುವವನಾಗು. ಇದಕ್ಕೆ ಬ್ರಹ್ಮತ್ವವೋ, ವಿಷ್ಣುತ್ವವೋ ಫಲವೆಂದು ಆದನ್ನು ಕೊಡುತ್ತೀಯಲ್ಲವೇ? (ಆದರೆ) ಪುನಃ ನಿನ್ನನ್ನು ನೋಡುವುದಕ್ಕಾಗಿ ಅಂತರಿಕ್ಷದಲ್ಲಿ ಪಕ್ಷಿತ್ವವನ್ನೂ, ಭೂಮಿಯಲ್ಲಿ ಮೃಗತ್ವವನ್ನೂ ಹೊಂದಿ, ಹಾಗೆ ಮಾಡಿಯೂ ನಿನ್ನನ್ನು ನೋಡದೆ ಉಂಟಾಗುವ ದುಃಖವನ್ನು ಹೇಗೆ ಸಹಿಸಲಿ?*

---

*ಪರಿಶಿಷ್ಟವನ್ನು ನೋಡಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕದಾ ವಾ ಕೈಲಾಸೇ ಕನಕಮಣಿಸೌಧೇ ಸಪಗಣೈ-
ರ್ವಸನ್ ಶಂಭೋರಗ್ರೇ ಸ್ಫುಟಘಟಿತಮೂರ್ಧಾಂಜಲಿಪುಟಃ ।
ವಿಭೋ ಸಾಂಬ ಸ್ವಾಮಿನ್ ಪರಮಶಿವ ಪಾಹೀತಿ ನಿಗದನ್
ವಿಧಾತೃಣಾಂ ಕಲ್ಪಾನ್ ಕ್ಷಣಮಿವ ವಿನೇಷ್ಯಾಮಿ ಸುಖಿತಃ ॥ ೨೪ ॥

೨೪. ನಾನು ಕೈಲಾಸಪರ್ವತದಲ್ಲಿ ಕನಕಮಣಿಮಯವಾದ ಅರಮನೆಯಲ್ಲಿ ಪ್ರಮಥಗಣಗಳೊಂದಿಗೆ ವಾಸಿಸುತ್ತ, ಶಂಭುವಿನ ಮುಂದೆ ಶಿರದ ಮೇಲೆ ಎರಡೂ ಕೈಗಳನ್ನು ಸರಿಯಾಗಿ ಜೋಡಿಸಿಟ್ಟುಕೊಂಡವನಾಗಿ 'ವಿಭುವೇ, ಸಾಂಬನೇ, ಸ್ವಾಮಿಯೇ, ಪರಮಶಿವನೇ, ಕಾಪಾಡು!' ಎಂದು ಹೇಳುತ್ತ ಬ್ರಹ್ಮರ ಕಲ್ಪಗಳನ್ನು ಕ್ಷಣದಂತೆ ಸುಖವಾಗಿ ಎಂದಿಗೆ ಕಳೆದೇನು?

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ತವೈರ್ಬ್ರಹ್ಮಾದೀನಾಂ ಜಯಜಯವಚೋಭಿರ್ನಿಯಮಿನಾಂ
ಗಣಾನಾಂ ಕೇಲೀಭಿರ್ಮದಕಲಮಹೋಕ್ಷಸ್ಯ ಕಕುದಿ ।
ಸ್ಥಿತಂ ನೀಲಗ್ರೀವಂ ತ್ರಿನಯನಮುಮಾಶ್ಲಿಷ್ಟವಪುಷಂ
ಕದಾ ತ್ವಾಂ ಪಶ್ಯೇಯಂ ಕರಧೃತಮೃಗಂ ಖಂಡಪರಶುಮ್ ॥ ೨೫ ॥

೨೫. ಬ್ರಹ್ಮಾದಿಗಳ ಸ್ತೋತ್ರಗಳಿಂದಲೂ ಯೋಗಿಗಳ ಜಯಜಯಕಾರದಿಂದಲೂ ಪ್ರಮಥಗಣಗಳ ಕ್ರೀಡಾಶಬ್ದದಿಂದಲೂ ಕೂಡಿ, ಮದಿಸಿದ ಧ್ವನಿಯನ್ನುಂಟುಮಾಡುತ್ತಿರುವ ನಂದಿಯ ಬೆನ್ನಿನ ಮೇಲೆ ಪಾರ್ವತಿಯಿಂದ ಆಲಿಂಗಿತನಾಗಿ ಕುಳಿತಿರುವ, ಕೈಯಲ್ಲಿ ಮೃಗ-ಖಂಡಪರಶುಗಳನ್ನು ಧರಿಸಿರುವ ನೀಲಕಂಠನಾದ ನಿನ್ನನ್ನು ಯಾವಾಗ ನೋಡೇನು?

Sri Vidyabharathi Book Centre, Sringeri

CC-O. In Public Domain. Digitized by eGangotri

ಕದಾ ವಾ ತ್ವಾಂ ದೃಷ್ಟ್ವಾ ಗಿರಿಶ ತವ ಭವ್ಯಾಂಘ್ರಿಯುಗಲಂ
ಗೃಹೀತ್ವಾ ಪಸ್ತಾಭ್ಯಾಂ ಶಿರಸಿ ನಯನೇ ವಕ್ಷಸಿ ಪಹನ್ ।
ಸಮಾಶ್ಲಿಷ್ಯಾಘ್ರಾಯ ಸ್ಫುಟಜಲಜಗಂಧಾನ್ ಪರಿಮಲಾ-
ನಲಭ್ಯಾಂ ಬ್ರಹ್ಮಾದ್ಯೈರ್ಮುದಮನುಭವಿಷ್ಯಾಮಿ ಹೃದಯೇ ॥ ೨೬ ॥

೨೬. ಹೇ ಗಿರಿಶ, ನಿನ್ನನ್ನು ಸಾಕ್ಷಾತ್ಕರಿಸಿಕೊಂಡು, ನಿನ್ನ ಪವಿತ್ರಚರಣ ಯುಗ್ಮವನ್ನು ಕೈಗಳಲ್ಲಿ ಹಿಡಿದುಕೊಂಡು, ಅದನ್ನು ನನ್ನ ಶಿರಸ್ಸಿನಲ್ಲಿಯೂ ಕಣ್ಣಿನಲ್ಲಿಯೂ ಎದೆಯಲ್ಲಿಯೂ ಧರಿಸಿಕೊಂಡು, ಆಲಿಂಗಿಸಿ, ವಿಕಸಿತವಾದ ಕಮಲಗಳಲ್ಲಿರುವ ಪರಿಮಳವನ್ನು ಅದರಲ್ಲಿ ಆಘ್ರಾಣಿಸುತ್ತ, ಬ್ರಹ್ಮಾದಿದೇವತೆಗಳಿಗೂ ಲಭ್ಯವಲ್ಲದ ಆನಂದವನ್ನು ನನ್ನ ಹೃದಯದಲ್ಲಿ ಎಂದು ಅನುಭವಿಸಿಯೇನು?

Sri Vidyabharathi Book Centre, Sringeri

CC-O. In Public Domain. Digitized by eGangotri

ಕರಸ್ಥೇ ಹೇಮಾದ್ರೌ ಗಿರಿಶ ನಿಕಟಸ್ಥೇ ಧನಪತೌ
ಗೃಹಸ್ಥೇ ಸ್ವರ್ಭೂಜಾಽಮರಸುರಭಿಚಿಂತಾಮಣಿಗಣೇ ।
ಶಿರಸ್ಥೇ ಹಿಮಾಂಶೌ ಚರಣಯುಗಲಸ್ಥೇಽಖಿಲಶುಭೇ
ಕಮರ್ಥಂ ದಾಸ್ಯೇಽಹಂ ಭವತು ಭವದರ್ಥಂ ಮಮ ಮನಃ ॥ ೨೭ ॥

೨೭. ಗಿರಿಶನೇ, ಹೇಮಾದ್ರಿಯು ನಿನ್ನ ಕೈಯ್ಯಲ್ಲಿರಲು, ಧನಪತಿಯಾದ ಕುಬೇರನು ನಿನ್ನ ಬಳಿ ನಿಂತಿರಲು, ಕಲ್ಪವೃಕ್ಷ-ಕಾಮಧೇನು-ಚಿಂತಾಮಣಿಗಳು ನಿನ್ನ ಮನೆಯಲ್ಲಿರಲು, ನಿನ್ನ ಶಿರಸ್ಸಿನಲ್ಲಿ ಶೀತಾಂಶುವಾದ ಚಂದ್ರನಿರಲು, ಸಮಸ್ತ ಶುಭವೂ ನಿನ್ನ ಪಾದದಡಿಯಲ್ಲಿ ಬಿದ್ದಿರಲು ನಾನು ನಿನಗೆ ಯಾವ ವಸ್ತುವನ್ನು ತಾನೇ ಕೊಡ ಬಲ್ಲೆನು! ಅಗಲಿ, ಚಿಂತೆಯಿಲ್ಲ. ನನ್ನ ಮನಸ್ಸು ನಿನಗೋಸ್ಕರ ಅರ್ಪಿತವಾಗಿರಲಿ!

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾರೂಪ್ಯಂ ತವ ಪೂಜನೇ ಶಿವ ಮಹಾದೇವೇತಿ ಸಂಕೀರ್ತನೇ
ಸಾಮೀಪ್ಯಂ ಶಿವಭಕ್ತಿಧುರ್ಯಜನತಾಸಾಂಗತ್ಯಸಂಭಾಷಣೇ ।
ಸಾಲೋಕ್ಯಂ ಚ ಚರಾಚರಾತ್ಮಕತನುಧ್ಯಾನೇ ಭವಾನೀಪತೇ
ಸಾಯುಜ್ಯಂ ಮಮ ಸಿದ್ಧಮತ್ರ ಭವತಿ ಸ್ವಾಮಿನ್ ಕೃತಾರ್ಥೋಽಸ್ಮ್ಯಹಮ್ ॥ ೨೮ ॥

೨೮. ಹೇ ಭವಾನೀಪತಿ, ನಿನ್ನ ಪೂಜೆಯಿಂದ ಸಾರೂಪ್ಯ ಮುಕ್ತಿಯೂ, 'ಶಿವ, ಮಹಾದೇವ' ಎಂದು ಸ್ತುತಿಸುವುದರಿಂದ ಸಾಮೀಪ್ಯಮುಕ್ತಿಯೂ, ಶಿವಭಕ್ತಿಯಲ್ಲಿ ಶ್ರೇಷ್ಠರಾದವರೊಡನೆ ಸಹವಾಸ-ಸಂಭಾಷಣೆಗಳಿಂದ ಸಾಲೋಕ್ಯಮುಕ್ತಿಯೂ, ನಿನ್ನ ಚರಾಚರಾತ್ಮಕ-ರೂಪದ (ಶರೀರದ) ಧ್ಯಾನದಿಂದ ಸಾಯುಜ್ಯ ಮುಕ್ತಿಯೂ ನನಗೆ ಇಲ್ಲಿಯೇ ಸಿದ್ಧವಾಗುತ್ತವೆ. ಹೇ ಸ್ವಾಮಿನ್, ನಾನು ಕೃತಾರ್ಥನು!

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ವತ್ಪಾದಾಂಬುಜಮರ್ಚಯಾಮಿ ಪರಮಂ ತ್ವಾಂ ಚಿಂತಯಾಮ್ಯನ್ವಹಂ
ತ್ವಾಮೀಶಂ ಶರಣಂ ವ್ರಜಾಮಿ ವಚಸಾ ತ್ವಾಮೇವ ಯಾಚೇ ವಿಭೋ ।
ವೀಕ್ಷಾಂ ಮೇ ದಿಶ ಚಾಕ್ಷುಷೀಂ ಸಕರುಣಾಂ ದಿವ್ಯೈಶ್ಚಿರಂ ಪ್ರಾರ್ಥಿತಾಂ
ಶಂಭೋ ಲೋಕಗುರೋ ಮದೀಯಮನಸಃ ಸೌಖ್ಯೋಪದೇಶಂ ಕುರು ॥ ೨೯ ॥

೨೯. ಹೇ ವಿಭು, ನಿನ್ನ ಪಾದಕಮಲಗಳನ್ನು ಪೂಜಿಸುತ್ತೇನೆ. ಶ್ರೇಷ್ಠನಾದ ನಿನ್ನನ್ನು ಪ್ರತಿದಿನವೂ ಚಿಂತಿಸುತ್ತೇನೆ. ಈಶನಾದ ನಿನ್ನನ್ನೇ ಶರಣುಹೋಗುತ್ತೇನೆ. ಮಾತಿನ ಮೂಲಕ ನಿನ್ನನ್ನೇ ಬೇಡುತ್ತೇನೆ. ಹೇ ಶಂಭು, ಲೋಕಗುರು, ಯಾವುದಕ್ಕಾಗಿ ದೇವತೆಗಳು ಬಹುಕಾಲದಿಂದ ಪ್ರಾರ್ಥಿಸುತ್ತಿರುವರೋ ಅಂಥ ಕರುಣಾಕಟಾಕ್ಷವನ್ನು ನನ್ನ ಮೇಲೆ ಬೀರು, ನನ್ನ ಮನಸ್ಸಿಗೆ ಸುಖವನ್ನುಂಟುಮಾಡು.

Sri Vidyabharathi Book Centre, Sringeri

CC-O. In Public Domain. Digitized by eGangotri

ಪಸ್ತ್ರೋದ್ಭೂತವಿಧೌ ಸಹಸ್ರಕರತಾ ಪುಷ್ಪಾರ್ಚನೇ ವಿಷ್ಣುತಾ
ಗಂಧೇ ಗಂಧವಹಾತ್ಮತಾಽನ್ನಪಚನೇ ಬರ್ಹಿರ್ಮುಖಾಧ್ಯಕ್ಷತಾ ।
ಪಾತ್ರೇ ಕಾಂಚನಗರ್ಭತಾಽಸ್ತಿ ಮಯಿ ಚೇದ್ಬಾಲೇಂದುಚೂಡಾಮಣೇ
ಶುಶ್ರೂಷಾಂ ಕರವಾಣಿ ತೇ ಪಶುಪತೇ ಸ್ವಾಮಿನ್ತ್ರಿಲೋಕೀಗುರೋ ॥ ೩೦ ॥

೩೦. ಹೇ ಬಾಲೇಂದುಚೂಡಾಮಣೆ, ಪಶುಪತಿ, ಸ್ವಾಮಿನ್, ತ್ರಿಲೋಕಗುರು! ನಿನಗೆ ಸಮರ್ಪಣೆ ಮಾಡಬೇಕಾದ ವಸ್ತ್ರಗಳನ್ನು ಒಗೆದು ಶುಭ್ರವಾಗಿರಿಸಬೇಕಾದರೆ ನಾನು ಸಹಸ್ರಕರನಾದ ಸೂರ್ಯನೇ ಆಗಬೇಕು. ಪುಷ್ಪವನ್ನು ಅರ್ಪಿಸಬೇಕಾದರೆ ವಿಷ್ಣುವಾಗಬೇಕು. ಗಂಧವನ್ನರ್ಪಿಸಬೇಕಾದರೆ ವಾಯುವಾಗಬೇಕು. ನೈವೇದ್ಯವನ್ನು ಮಾಡಬೇಕಾದರೆ ಇಂದ್ರನಾಗಬೇಕು. ಪಾತ್ರೆಯನ್ನರ್ಪಿಸಬೇಕಾದರೆ ಹಿರಣ್ಯಗರ್ಭ ಬ್ರಹ್ಮನಾಗಬೇಕು. ಇವರೆಲ್ಲರ ಶಕ್ತಿಯು ನನ್ನಲ್ಲಿದ್ದರೆ ಮಾತ್ರ ನಿನ್ನ ಶುಶ್ರೂಷೆಯನ್ನು ನೆರವೇರಿಸಬಹುದಾಗಿತ್ತು!

Sri Vidyabharathi Book Centre, Sringeri

CC-O. In Public Domain. Digitized by eGangotri

ನಾಲಂ ವಾ ಪರಮೋಪಕಾರಕಮಿದಂ ತ್ವೇಕಂ ಪಶೂನಾಂ ಪತೇ
ಪಶ್ಯನ್ ಕುಕ್ಷಿಗತಾಂಶ್ಚರಾಚರಗಣಾನ್ ಬಾಹ್ಯಸ್ಥಿತಾನ್ ರಕ್ಷಿತುಮ್ ।
ಸರ್ವಾಮರ್ತ್ಯಪಲಾಯನೌಷಧಮತಿಜ್ವಾಲಾಕರಂ ಭೀಕರಂ
ನಿಕ್ಷಿಪ್ತಂ ಗರಲಂ ಗಲೇ ನ ಗಿಲಿತಂ ನೋದ್ಗೀರ್ಣಮೇವ ತ್ವಯಾ ॥ ೩೧॥

೩೧. ಹೇ ಪಶುಪತಿ, ಜ್ವಾಲೆಯನ್ನು ಕಾರುತ್ತ ಭೀಕರವಾಗಿದ್ದ ಯಾವ ವಿಷವನ್ನು ಕಂಡು ದೇವಾಸುರರು ಪಲಾಯನಗೈದರೋ ಅಂಥ ವಿಷವನ್ನು-ನಿನ್ನ ಹೊಟ್ಟೆಯಲ್ಲಿದ್ದ ಮತ್ತು ಹೊರಗೂ ಇದ್ದ ಚರಾಚರ ವಸ್ತುಗಳನ್ನು ರಕ್ಷಿಸುವುದಕ್ಕಾಗಿ-ನೀನು ಒಳಕ್ಕೂ ನುಂಗದೆ ಹೊರಕ್ಕೂ ಉಗುಳದೆ ನಿನ್ನ ಕಂಠದಲ್ಲಿಯೇ ಇರಿಸಿಕೊಂಡೆ. ಪರಮೋಪ ಕಾರಕವಾದ ಈ ಕ್ರಿಯೆಯೊಂದೇ ಸಾಲದೆ (ನಿನ್ನ ಕಾರುಣ್ಯಪ್ರದರ್ಶನಕ್ಕೆ)?

Sri Vidyabharathi Book Centre, Sringeri

CC-O. In Public Domain. Digitized by eGangotri

ಜ್ವಾಲೋಗ್ರಸ್ಸಕಲಾಮರಾತಿಭಯದಃ ಕ್ಷ್ವೇಲಃ ಕಥಂ ವಾ ತ್ವಯಾ
ದೃಷ್ಟಃ ಕಿಂ ಚ ಕರೇ ಧೃತಃ ಕರತಲೇ ಕಿಂ ಪಕ್ವಜಂಬೂಫಲಮ್ ।
ಜಿಹ್ವಾಯಾಂ ನಿಹಿತಶ್ಚ ಸಿದ್ಧಘುಟಿಕಾ ವಾ ಕಂಠದೇಶೇ ಧೃತಃ
ಕಿಂ ತೇ ನೀಲಮಣಿರ್ವಿಭೂಷಣಮಯಂ ಶಂಭೋ ಮಹಾತ್ಮನ್ವದ ॥ ೩೨ ॥

೩೨. ಶಂಭುವೇ, ಮಹಾತ್ಮನೇ, ಜ್ವಾಲೆಗಳನ್ನು ಕಾರುತ್ತ ಎಲ್ಲ ದೇವತೆಗಳಿಗೂ ಭಯವನ್ನುಂಟುಮಾಡುತ್ತಿರುವ ಆ ವಿಷವನ್ನು ನೀನು ಹೇಗೆ ತಾನೇ ನೋಡಿದೆ? ಅದನ್ನು ಹೇಗೆ ಕೈಯಲ್ಲಿ ಧರಿಸಿದೆ? ಪಕ್ವವಾದ ಜಂಬೂಫಲವೆಂದು ಭಾವಿಸಿ ಅಂಗೈಯಲ್ಲಿಟ್ಟುಕೊಂಡೆಯಾ? ಸಿದ್ಧರ ಗುಳಿಗೆಯೆಂದು ನಾಲಿಗೆಯ ಮೇಲೆ ಇಟ್ಟುಕೊಂಡೆಯಾ? 'ಇದೊಂದು ನೀಲಮಣಿ, ನನಗೆ ವಿಭೂಷಣವೇ ಆದೀತು' ಎಂದು ಭಾವಿಸಿ ಕಂಠದೇಶದಲ್ಲಿ ಧರಿಸಿದೆಯಾ? ಹೇಳು!

CC-O. In Public Domain. Digitized by eGangotri

ನಾಲಂ ವಾ ಸಕೃದೇವ ದೇವ ಭವತಸ್ಸೇವಾ ನತಿರ್ವಾ ನುತಿಃ
ಪೂಜಾ ವಾ ಸ್ಮರಣಂ ಕಥಾಶ್ರವಣಮಪ್ಯಾಲೋಕನಂ ಮಾದೃಶಾಮ್ ।
ಸ್ವಾಮಿನ್ನಸ್ಥಿರದೇವತಾನುಸರಣಾಯಾಸೇನ ಕಿಂ ಲಭ್ಯತೇ
ಕಾ ವಾ ಮುಕ್ತಿರಿತಃ ಕುತೋ ಭವತಿ ಚೇತ್ಕಿಂ ಪ್ರಾರ್ಥನೀಯಂ ತದಾ ॥ ೩೩ ॥

೩೩. ಹೇ ದೇವ ನಮ್ಮಂಥವರಿಗೆ ನಿನ್ನ ಸೇವೆ ನಮಸ್ಕಾರ ಸ್ತುತಿ ಪೂಜೆ ಸ್ಮರಣ ಕಥಾಶ್ರವಣ ದರ್ಶನ-ಇವುಗಳನ್ನು ಒಮ್ಮೆ ಮಾಡಿದರೆ ಸಾಲದೆ? ಹೇ ಸ್ವಾಮಿನ್, ಅಸ್ಥಿರರಾದ ಇತರ ದೇವತೆಗಳನ್ನು ಅನುಸರಿಸುವ ಆಯಾಸದಿಂದ ಏನು ದೊರಕೀತು? (ನಿನ್ನ ಸೇವಾದಿರೂಪದ) ಇದಕ್ಕಿಂತ ಬೇರೆ ಮುಕ್ತಿಯಾದರೂ ಯಾವುದು? ಅದು ನಿನ್ನನ್ನು ಹೊರತು ಬೇರಾವ ದೇವತೆಯಿಂದ ಲಭಿಸೀತು? (ಒಂದು ವೇಳೆ) ಲಭಿಸುವುದಾದರೂ ಆಗ ಇವನ್ನು ಬಿಟ್ಟು ಪ್ರಾರ್ಥಿಸತಕ್ಕುದಾದರೂ ಯಾವುದು?

Sri Vidyabharathi Book Centre, Sringeri

CC-O. In Public Domain. Digitized by eGangotri

ಕಿಂ ಬ್ರೂಮಸ್ತವ ಸಾಹಸಂ ಪಶುಪತೇ ಕಸ್ಯಾಸ್ತಿ ಶಂಭೋ ಭವ-
ದ್ಧೈರ್ಯಂ ಚೇದೃಶಮಾತ್ಮನಃ ಸ್ಥಿತಿರಿಯಂ ಚಾನ್ಯೈಃ ಕಥಂ ಲಭ್ಯತೇ ।
ಭ್ರಶ್ಯದ್ದೇವಗಣಂ ತ್ರಸನ್ಮುನಿಗಣಂ ನಶ್ಯತ್ಪ್ರಪಂಚಂ ಲಯಂ
ಪಶ್ಯನ್ನಿರ್ಭಯ ಏಕ ಏವ ವಿಹರತ್ಯಾನಂದಸಾಂದ್ರೋ ಭವಾನ್ ॥ ೩೪ ॥

೩೪. ಪಶುಪತಿ, ನಿನ್ನ ಸಾಹಸವನ್ನು ಕುರಿತು ಏನು ಹೇಳೋಣ! ನಿನ್ನಲ್ಲಿರುವಂಥ ಧೈರ್ಯ ಮತ್ತಾರಲ್ಲಿದೆ? ನಿನ್ನ ಈ ಸ್ಥಿತಿಯನ್ನು ಇತರರು ಹೇಗೆ ತಾನೇ ಹೊಂದ ಬಲ್ಲರು! (ಪ್ರಲಯಕಾಲದಲ್ಲಿ) ದೇವಗಣವು ಪತನ ಹೊಂದುತ್ತಿರಲು, ಮುನಿಗಣವು ಭಯಪಡುತ್ತಿರಲು, ಪ್ರಪಂಚವು ನಶಿಸುತ್ತಿರಲು ಆ ಪ್ರಲಯವನ್ನು ನೋಡುತ್ತ ಆನಂದಘನನಾದ ನೀನು ನಿರ್ಭಯನಾಗಿಯೂ ಅದ್ವಿತೀಯನಾಗಿಯೂ ವಿಹರಿಸುತ್ತೀಯೆ!

CC-O. In Public Domain. Digitized by eGangotri

ಯೋಗಕ್ಷೇಮಧುರಂಧರಸ್ಯ ಸಕಲಶ್ರೇಯಃಪ್ರದೋದ್ಯೋಗಿನೋ
ದೃಷ್ಟಾದೃಷ್ಟಮತೋಪದೇಶಕೃತಿನೋ ಬಾಹ್ಯಾಂತರವ್ಯಾಪಿನಃ ।
ಸರ್ವಜ್ಞಸ್ಯ ದಯಾಕರಸ್ಯ ಭವತಃ ಕಿಂ ವೇದಿತವ್ಯಂ ಮಯಾ
ಶಂಭೋ ತ್ವಂ ಪರಮಾಂತರಂಗ ಇತಿ ಮೇ ಚಿತ್ತೇ ಸ್ಮರಾಮ್ಯನ್ವಹಮ್ ॥ ೩೫॥

೩೫. (ಭಕ್ತರ) ಯೋಗಕ್ಷೇಮದ ಭಾರವನ್ನು ವಹಿಸಿದವನಾದ, ಸಕಲ ಶ್ರೇಯಸ್ಸುಗಳನ್ನೂ ಕೊಡುವುದರಲ್ಲಿ ಉದ್ಯುಕ್ತನಾಗಿರುವ, ಐಹಿಕ-ಆಮುಷ್ಮಿಕ-ಫಲೋಪಾಯಗಳನ್ನು ಉಪದೇಶಿಸುವುದರಲ್ಲಿ ಸಮರ್ಥನಾದ, (ಜಗತ್ತನ್ನು) ಒಳಗೂ ಹೊರಗೂ ವ್ಯಾಪಿಸಿರುವ, ಸರ್ವಜ್ಞನೂ ದಯಾಕರನೂ ಆದ ನಿನ್ನಲ್ಲಿ ನಾನು ಅರಿಕೆ ಮಾಡಿಕೊಳ್ಳುವುದು ಏನು ತಾನೇ ಇದೆ? ಶಂಭುವೇ, ನೀನೇ ನನ್ನ ಪರಮಾಂತರಂಗವೆಂದು ನನ್ನ ಮನಸ್ಸಿನಲ್ಲಿ ಸದಾ ಸ್ಮರಿಸುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಭಕ್ತೋ ಭಕ್ತಿಗುಣಾವೃತೇ ಮುದಮೃತಾಪೂರ್ಣೇ ಪ್ರಸನ್ನೇ ಮನಃ-
ಕುಂಭೇ ಸಾಂಬ ತವಾಂಘ್ರಿಪಲ್ಲವಯುಗಂ ಸಂಸ್ಥಾಪ್ಯ ಸಂವಿತ್ಫಲಮ್।
ಸತ್ತ್ವಂ ಮಂತ್ರಮುದೀರಯನ್ನಿಜಶರೀರಾಗಾರಶುದ್ಧಿಂ ವಹನ್
ಪುಣ್ಯಾಹಂ ಪ್ರಕಟೀಕರೋಮಿ ರುಚಿರಂ ಕಲ್ಯಾಣಮಾಪಾದಯನ್ ॥ ೩೬ ॥

೩೬. ಸಾಂಬನೇ, ಭಕ್ತನಾದ ನಾನು, ಭಕ್ತಿಯೆಂಬ ದಾರದಿಂದ ಸುತ್ತಲ್ಪಟ್ಟ, ಸಂತೋಷವೆಂಬ ನೀರಿನಿಂದ ತುಂಬಿರುವ, ಶಾಂತವಾದ ಮನಸ್ಸೆಂಬ ಕುಂಭದಲ್ಲಿ ನಿನ್ನ ಪಾದಕಮಲಯುಗ್ಮವೆಂಬ ಚಿಗುರನ್ನು ಸ್ಥಾಪಿಸಿ, ಜ್ಞಾನವೆಂಬ ತೆಂಗಿನಕಾಯನ್ನು (ಅಲ್ಲಿ) ಇಟ್ಟು, ಸತ್ತ್ವಶಾಲಿಯಾದ (ನಿನ್ನ ನಾಮ-) ಮಂತ್ರವನ್ನುಚ್ಚರಿಸುತ್ತ, ನನ್ನ ಶರೀರವೆಂಬ ಮನೆಯನ್ನು ಶುದ್ಧಿಗೊಳಿಸಿ, ಸುಖಕರವಾದ ಕಲ್ಯಾಣವನ್ನುಂಟು ಮಾಡುತ್ತ ಪುಣ್ಯಾಹಕರ್ಮವನ್ನು ಆಚರಿಸುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಮ್ನಾಯಾಂಬುಧಿಮಾದರೇಣ ಸುಮನಸ್ಸಂಘಾಸ್ಸಮುದ್ಯನ್ಮನೋ
ಮಂಥಾನಂ ದೃಢಭಕ್ತಿರಜ್ಜುಸಹಿತಂ ಕೃತ್ವಾ ಮಥಿತ್ವಾ ತತಃ ।
ಸೋಮಂ ಕಲ್ಪತರುಂ ಸುಪರ್ವಸುರಭಿಂ ಚಿಂತಾಮಣಿಂ ಧೀಮತಾಂ
ನಿತ್ಯಾನಂದಸುಧಾಂ ನಿರಂತರರಮಾಸೌಭಾಗ್ಯಮಾತನ್ವತೇ ॥ ೩೭ ॥

೩೭. ಶುದ್ಧಮಾನಸರೆಂಬ ದೇವತೆಗಳ ಸಮೂಹಗಳು ಅದರದಿಂದ ದೃಢ ಭಕ್ತಿಯೆಂಬ ಹಗ್ಗದೊಡನೆ ಕೂಡಿರುವ ಮನಸ್ಸನ್ನು ಕಡೆಗೋಲನ್ನಾಗಿ ಮಾಡಿ, ವೇದವೆಂಬ ಸಮುದ್ರವನ್ನು ಕಡೆದು, ಅದರಿಂದ ಚಂದ್ರ-ಕಲ್ಪತರು-ಕಾಮಧೇನು-ಚಿಂತಾಮಣಿಗಳಿಗೆ ಸಮನಾದ, ಧೀಮಂತರಿಗೆ ನಿತ್ಯಾನಂದದಾಯಕನಾದ, ಅಮೃತಕ್ಕೆ ಸಮನಾದ, ನಿರಂತರ ಸೌಭಾಗ್ಯಲಕ್ಷ್ಮಿಯಂತಿರುವ, (ನಿನ್ನನ್ನು) ಪಡೆಯುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಾಕ್ಪುಣ್ಯಾಚಲಮಾರ್ಗದರ್ಶಿತಸುಧಾಮೂರ್ತಿಃ ಪ್ರಸನ್ನಶ್ಶಿವಃ
ಸೋಮಸ್ಸದ್ಗಣಸೇವಿತೋ ಮೃಗಧರಃ ಪೂರ್ಣಸ್ತಮೋಮೋಚಕಃ ।
ಚೇತಃಪುಷ್ಕರಲಕ್ಷಿತೋ ಭವತಿ ಚೇದಾನಂದಪಾಥೋನಿಧಿಃ
ಪ್ರಾಗಲ್ಭ್ಯೇನ ವಿಜೃಂಭತೇ ಸುಮನಸಾಂ ವೃತ್ತಿಸ್ತದಾ ಜಾಯತೇ ॥ ೩೮ ॥

೩೮. ಪೂರ್ವಜನ್ಮಸಂಚಿತವಾದ ಪುಣ್ಯವೆಂಬ ಪವಿತ್ರವಾದ ಉದಯಾಚಲದ ಮೂಲಕ ತೋರಿಸಿದ ಸುಧಾಮಮಯವಾದ ಮೂರ್ತಿಯುಳ್ಳವನೂ, ಪ್ರಸನ್ನನೂ ಮಂಗಲಕರನೂ, ಶೋಭನರಾದ ಪ್ರಮಥಗಳೆಂಬ ನಕ್ಷತ್ರಸಮೂಹದಿಂದ ಸೇವಿತನೂ, ಮೃಗಧರನೂ, ಪೂರ್ಣನೂ, ಅಜ್ಞಾನಾಂಧಕಾರವನ್ನು ಹೋಗಲಾಡಿಸುವವನೂ ಆದ ಉಮಾಮಹೇಶ್ವರನೆಂಬ ಚಂದ್ರನು ಹೃದಯಕಮಲವೆಂಬ ಆಕಾಶದಲ್ಲಿ ಕಾಣಲ್ಪಟ್ಟವನಾದರೆ ಆನಂದವೆಂಬ ಸಮುದ್ರವು ಅತಿ ಹೆಚ್ಚು ಉಕ್ಕೇರುತ್ತದೆ; ಮತ್ತು ಆಗ (ಅಂಥ ನಿನ್ನ ಭಕ್ತನಿಗೆ) ಶುದ್ಧಮಾನಸರಾದ (ಮುಕ್ತಜೀವಿಗಳು ಅನುಭವಿಸುತ್ತಿರುವ) ಬ್ರಹ್ಮಾಕಾರ ವೃತ್ತಿಯು ಉಂಟಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಧರ್ಮೋ ಮೇ ಚತುರಂಘ್ರಿಕಃ ಸುಚರಿತಃ ಪಾಪಂ ವಿನಾಶಂ ಗತಂ
ಕಾಮಕ್ರೋಧಮದಾದಯೋ ವಿಗಲಿತಾಃ ಕಾಲಾಃ ಸುಖಾವಿಷ್ಕೃತಾಃ ।
ಜ್ಞಾನಾನಂದಮಹೌಷಧಿಃ ಸುಫಲಿತಾ ಕೈವಲ್ಯನಾಥೇ ಸದಾ
ಮಾನ್ಯೇ ಮಾನಸಪುಂಡರೀಕನಗರೇ ರಾಜಾವತಂಸೇ ಸ್ಥಿತೇ ॥ ೩೯ ॥

೩೯. ಮೋಕ್ಷಾಧಿಪತಿಯಾದ ಪೂಜ್ಯನಾದ ಚಂದ್ರಶೇಖರನೆಂಬ ಚಕ್ರವರ್ತಿಯು ನನ್ನ ಹೃದಯಕಮಲವೆಂಬ ನಗರದಲ್ಲಿ ಯಾವಾಗಲೂ ನೆಲಸಿರಲು ನಾಲ್ಕೂ ಪಾದಗಳನ್ನು ಹೊಂದಿರುವ ಧರ್ಮವು ಚೆನ್ನಾಗಿ ಆಚರಿಸಲ್ಪಡುತ್ತಿದೆ; ಪಾಪವು ವಿನಷ್ಟವಾಗಿದೆ, ಕಾಮ-ಕ್ರೋಧ-ಮದಾದಿಗಳು ಬಿಟ್ಟುಹೋಗಿವೆ, ಕಾಲವು ಸುಖವನ್ನು ತಂದುಕೊಡುತ್ತಿದೆ, ಜ್ಞಾನಾನಂದವೆಂಬ ಮಹಾಸಸ್ಯವು ಉತ್ತಮ ಫಲಗಳನ್ನೀಯುತ್ತಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಧೀಯಂತ್ರೇಣ ವಚೋಘಟೇನ ಕವಿತಾಕುಲ್ಯೋಪಕುಲ್ಯಾಕ್ರಮೈ-
ರಾನೀತೈಶ್ಚ ಸದಾಶಿವಸ್ಯ ಚರಿತಾಂಭೋರಾಶಿದಿವ್ಯಾಮೃತೈಃ ।
ಹೃತ್ಕೇದಾರಯುತಾಶ್ಚ ಭಕ್ತಿಕಲಮಾಃ ಸಾಫಲ್ಯಮಾತನ್ವತೇ
ದುರ್ಭಿಕ್ಷಾನ್ಮಮ ಸೇವಕಸ್ಯ ಭಗವನ್ವಿಶ್ವೇಶ ಭೀತಿಃ ಕುತಃ ॥ ೪೦ ॥

೪೦. ಹೇ ಭಗವನ್, ವಿಶ್ವೇಶ, ಬುದ್ಧಿಯೆಂಬ ಯಂತ್ರದ ಮೂಲಕ, ಮಾತುಗಳೆಂಬ ಘಟದಿಂದ, ಕವಿತೆಯೆಂಬ ಅನೇಕ ಕಾಲುವೆ-ಉಪಕಾಲುವೆಗಳ ಮೂಲಕ ತಂದ, ಸದಾಶಿವನ ಚರಿತ್ರೆಯೆಂಬ ಸಾಗರದ ಅಮೃತಜಲದಿಂದ ಹೃದಯವೆಂಬ ಕ್ಷೇತ್ರದಲ್ಲಿ ನೆಟ್ಟಿರುವ ಭಕ್ತಿಯೆಂಬ ಬತ್ತವು ಸಾಫಲ್ಯವನ್ನು ಹೊಂದುತ್ತಿರಲಾಗಿ ಸೇವಕನಾದ ನನಗೆ ದುರ್ಭಿಕ್ಷದ ಭೀತಿಯೆಲ್ಲಿಂದ ಬಂದೀತು?

Sri Vidyabharathi Book Centre, Sringeri

CC-O. In Public Domain. Digitized by eGangotri

ಪಾಪೋತ್ಪಾತವಿಮೋಚನಾಯ ರುಚಿರೈಶ್ವರ್ಯಾಯ ಮೃತ್ಯುಂಜಯ
ಸ್ತೋತ್ರಧ್ಯಾನನತಿಪ್ರದಕ್ಷಿಣಸಪರ್ಯಾಲೋಕನಾಕರ್ಣನೇ ।
ಜಿಹ್ವಾಚಿತ್ತಶಿರೋಽಂಘ್ರಿಪಸ್ತನಯನಶ್ರೋತ್ರೈರಹಂ ಪ್ರಾರ್ಥಿತೋ
ಮಾಮಾಜ್ಞಾಪಯ ತನ್ನಿರೂಪಯ ಮುಹುರ್ಮಾಮೇವ ಮಾ ಮೇಽವಚಃ ॥ ೪೧॥

೪೧. ಹೇ ಮೃತ್ಯುಂಜಯ, ಪಾಪಗಳೆಂಬ ಉತ್ಪಾತಗಳಿಂದ ಬಿಡುಗಡೆಯನ್ನು ಹೊಂದುವುದಕ್ಕಾಗಿಯೂ ಪ್ರಕಾಶಮಾನವಾದ (ಜ್ಞಾನವೆಂಬ) ಐಶ್ವರ್ಯಕ್ಕಾಗಿಯೂ ನನ್ನ ನಾಲಗೆ ಮನಸ್ಸು ಶಿರಸ್ಸು ಪಾದಪಾಣಿಗಳು ಕಣ್ಣುಕಿವಿಗಳು ಇವುಗಳಿಂದ ನಿನ್ನ ಸ್ತೋತ್ರ ಧ್ಯಾನ ನಮಸ್ಕಾರ ಪ್ರದಕ್ಷಿಣೆ ಪೂಜೆ ದರ್ಶನ ಶ್ರವಣ - ಈ ಕಾರ್ಯಗಳಲ್ಲಿ ತಮ್ಮನ್ನು ನಿಯೋಜಿಸಬೇಕೆಂದು ಕೇಳಿಕೊಳ್ಳಲ್ಪಟ್ಟಿರುವೆನು. ಆದ್ದರಿಂದ ನನಗೆ ಆಜ್ಞೆಯನ್ನು ಕೊಡು, ಪುನಃ ಪುನಃ ನನಗೆ ಆ ಸ್ತೋತ್ರಾದಿಗಳ ಕ್ರಮವನ್ನು ಕುರಿತು ದಯಮಾಡಿ ನಿರೂಪಿಸು. ನನ್ನ ವಿಷಯದಲ್ಲಿ ಔದಾಸೀನ್ಯವನ್ನು ಸರ್ವಥಾ ಮಾಡಬೇಡ.

Sri Vidyabharathi Book Centre, Sringeri

CC-O. In Public Domain. Digitized by eGangotri

ಗಾಂಭೀರ್ಯಂ ಪರಿಖಾಪದಂ ಘನಧೃತಿಃ ಪ್ರಾಕಾರ ಉದ್ಯದ್ಗುಣ-
ಸ್ತೋಮಶ್ಚಾಪ್ತಬಲಂ ಘನೇಂದ್ರಿಯಚಯೋ ದ್ವಾರಾಣಿ ದೇಹಸ್ಥಿತಃ ।
ವಿದ್ಯಾ ವಸ್ತುಸಮೃದ್ಧಿರಿತ್ಯಖಿಲಸಾಮಗ್ರೀಸಮೇತೇ ಸದಾ
ದುರ್ಗಾತಿಪ್ರಿಯದೇವ ಮಾಮಕಮನೋದುರ್ಗೇ ನಿವಾಸಂ ಕುರು ॥ ೪೨ ॥

೪೨. ದುರ್ಗೆಗೆ ಅತಿಪ್ರಿಯನಾದ ದೇವನೇ, ನನ್ನ ಮನಸ್ಸೆಂಬ ದುರ್ಗಕ್ಕೆ ಗಾಂಭೀರ್ಯವೇ ಕಂದಕ, ಧೈರ್ಯವೇ ಪ್ರಾಕಾರ, ವೃದ್ಧಿಹೊಂದಿರುವ ಸುಗುಣಗಳೇ ನಂಬಿಕೆಗೆ ಅರ್ಹವಾದ ಸೇನೆ; ದೇಹದಲ್ಲಿರುವ ಇಂದ್ರಿಯ ಸಮೂಹವೇ ಬಾಗಿಲುಗಳು, ವಿದ್ಯೆಯೇ ವಸ್ತುಸಮೃದ್ಧಿ. ಇಂಥ ಸಮಸ್ತ ಸಾಮಗ್ರಿಗಳನ್ನೂ ಹೊಂದಿರುವ (ಈ ದುರ್ಗದಲ್ಲಿ) ಸದಾ ವಾಸಮಾಡು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾ ಗಚ್ಛ ತ್ವಮಿತಸ್ತತೋ ಗಿರಿಶ ಭೋ ಮಯ್ಯೇವ ವಾಸಂ ಕುರು
ಸ್ವಾಮಿನ್ನಾದಿಕಿರಾತ ಮಾಮಕಮನಃ ಕಾಂತಾರಸೀಮಾಂತರೇ ।
ವರ್ತಂತೇ ಬಹುತೋ ಮೃಗಾ ಮದಜುಷೋ ಮಾತ್ಸರ್ಯಮೋಹಾದಯ-
ಸ್ತಾನ್ ಹತ್ವಾ ಮೃಗಯಾವಿನೋದರುಚಿತಾಲಾಭಂ ಚ ಸಂಪ್ರಾಪ್ಸ್ಯಸಿ ॥ ೪೩ ॥

೪೩. ಹೇ ಗಿರಿಶ, ನನ್ನಲ್ಲಿಯೇ ವಾಸಿಸು, ಇಲ್ಲಿಗೆ ಅಲ್ಲಿಗೆ ಹೋಗಬೇಡ! ಸ್ವಾಮಿನ್, ಆದಿಕಿರಾತನೇ! ನನ್ನ ಮನಸ್ಸೆಂಬ ಅಡವಿಯೊಳಗೆ ಕಾಮ ಮದ ಮಾತ್ಸರ್ಯ ಮೋಹ ಮೊದಲಾದ ಅನೇಕ ಕೊಬ್ಬಿದ ಮೃಗಗಳಿವೆ. (ಈ ಅಡವಿಯಲ್ಲಿ ನೀನು ನೆಲಸಿದುದೇ ಆದರೆ) ಆ ಮೃಗಗಳನ್ನು ಕೊಂದು ಬೇಟೆಯ ವಿನೋದವನ್ನೂ, ಆನಂದವನ್ನೂ ಹೊಂದುತ್ತೀಯೆ!

Sri Vidyabharathi Book Centre, Sringeri

CC-O. In Public Domain. Digitized by eGangotri

ಕರಲಗ್ನಮೃಗಃ ಕರೀಂದ್ರಭಂಗೋ
ಘನಶಾರ್ದೂಲವಿಖಂಡನೋಽಸ್ತಜಂತುಃ ।
ಗಿರಿಶೋ ವಿಶದಾಕೃತಿಶ್ಚ ಚೇತಃ-
ಕುಹರೇ ಪಂಚಮುಖೋಽಸ್ತಿ ಮೇ ಕುತೋ ಭೀಃ ॥ ೪೪ ॥

೪೪. ಕೈಯಲ್ಲಿ ಮೃಗವನ್ನು ಹಿಡಿದಿರುವ, ಗಜಾಸುರನನ್ನು ಸಂಹರಿಸಿರುವ, ದೊಡ್ಡ ಹುಲಿಯನ್ನು ತುಂಡುಮಾಡಿರುವ, ಪ್ರಾಣಿಗಳಿಗೆ ಮೃತ್ಯುಪ್ರಾಯನಾಗಿರುವ, ದೊಡ್ಡ ಆಕೃತಿಯನ್ನುಳ್ಳ ಗಿರಿಶನೆಂಬ ಸಿಂಹವು ನನ್ನ ಹೃದಯ ಗುಹೆಯಲ್ಲಿರುವಾಗ ನನಗೆ ಭಯವೆಲ್ಲಿಂದ ಬಂತು?

CC-O. In Public Domain. Digitized by eGangotri

ಛಂದಶ್ಶಾಖಿಶಿಖಾನ್ವಿತೈರ್ದ್ವಿಜವರೈಃ ಸಂಸೇವಿತೇ ಶಾಶ್ವತೇ
ಸೌಖ್ಯಾಪಾದಿನಿ ಖೇದಭೇದಿನಿ ಸುಧಾಸಾರೈಃ ಫಲೈರ್ದೀಪಿತೇ ।
ಚೇತಃಪಕ್ಷಿಶಿಖಾಮಣೇ ತ್ಯಜ ವೃಥಾ ಸಂಚಾರಮನ್ಯೈರಲಂ
ನಿತ್ಯಂ ಶಂಕರಪಾದಪದ್ಮಯುಗಲೀನೀಡೇ ವಿಹಾರಂ ಕುರು ॥ ೪೫ ॥

೪೫. ಮನಸ್ಸೆಂಬ ಪಕ್ಷಿಶ್ರೇಷ್ಠನೇ, ವೇದಗಳೆಂಬ ಮರಗಳ ಉಪನಿಷತ್ತುಗಳೆಂಬ ತುದಿಗಳನ್ನು ಸೇರಿಕೊಂಡಿರುವ ವಿಪ್ರಶ್ರೇಷ್ಠರೆಂಬ ಉತ್ತಮ ಪಕ್ಷಿಗಳಿಂದ ಆದರ ಪೂರ್ವಕವಾಗಿ ಸೇವಿಸಲ್ಪಡುತ್ತಿರುವ, ಶಾಶ್ವತವಾಗಿರುವ, ಸೌಖ್ಯವನ್ನು ತಂದು ಕೊಡುವ, ದುಃಖವನ್ನು ನಾಶಮಾಡುವ, ಅಮೃತರಸದಂಥ ರಸವನ್ನುಳ್ಳ ಫಲಗಳಿಂದ ಕೂಡಿದ ಶಂಕರ-ಪಾದಪದ್ಮ-ಯುಗಲವೆಂಬ ಗೂಡಿನಲ್ಲಿ ಸಂತೋಷದಿಂದ ವಾಸಿಸು. ವೃಥಾ ಸಂಚರಿಸುವುದನ್ನು ತ್ಯಜಿಸು. ಇತರ ಹವ್ಯಾಸಗಳನ್ನು ಸಾಕುಮಾಡು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಕೀರ್ಣೇ ನಖರಾಜಿಕಾಂತಿವಿಭವೈರುದ್ಯತ್ಸುಧಾವೈಭವೈ-
ರಾಧೌತೇಽಪಿ ಚ ಪದ್ಮರಾಗಲಲಿತೇ ಹಂಸವ್ರಜೈರಾಶ್ರಿತೇ ।
ನಿತ್ಯಂ ಭಕ್ತಿವಧೂಗಣೈಶ್ಚ ರಹಸಿ ಸ್ವೇಚ್ಛಾವಿಹಾರಂ ಕುರು
ಸ್ಥಿತ್ವಾ ಮಾನಸರಾಜಹಂಸ ಗಿರಿಜಾನಾಥಾಂಘ್ರಿಸೌಧಾಂತರೇ ॥ ೪೬ ॥

೪೬. ಎಲ್ಲೆ ಮಾನಸರಾಜಹಂಸನೇ, ಉಗುರುಗಳ ಕಾಂತಿಯಿಂದ ವ್ಯಾಪಿಸಲ್ಪಟ್ಟಿರುವ, ಚಂದ್ರನ ಪ್ರಕಾಶಮಾನವಾದ ಅಮೃತಕಿರಣಗಳೆಂಬ ಸುಣ್ಣದ ಲೇಪದಿಂದ ಧವಲವರ್ಣಯುಕ್ತವಾಗಿ ಶೋಭಿಸುತ್ತಿರುವ, ತನ್ನ ತಾವರೆಯ ಅರುಣಕಾಂತಿಯೆಂಬ ಪದ್ಮರಾಗರತ್ನದಿಂದ ಸುಂದರವಾದ, ಪರಮಹಂಸರೆಂದು ಪ್ರಸಿದ್ಧರಾದ ಯತಿಗಳಿಂದ ಆಶ್ರಯಿಸಲ್ಪಟ್ಟ, ಗಿರಿಜಾನಾಥನ ಪಾದಗಳೆಂಬ ಸೌಧದಲ್ಲಿ ನೆಲಸಿ, ಭಕ್ತಿಯೆಂಬ ವಧೂಗಣಗಳೊಡನೆ ರಹಸ್ಯವಾಗಿ ಮತ್ತು ಸ್ವೇಚ್ಛೆಯಿಂದ ವಿಹರಿಸು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶಂಭುಧ್ಯಾನವಸಂತಸಂಗಿನಿ ಹೃದಾರಾಮೇಽಘಜೀರ್ಣಚ್ಛದಾಃ
ಸ್ರಸ್ತಾ ಭಕ್ತಿಲತಾಚ್ಛಟಾ ವಿಲಸಿತಾಃ ಪುಣ್ಯಪ್ರವಾಲಾಶ್ರಿತಾಃ ।
ದೀಪ್ಯಂತೇ ಗುಣಕೋರಕಾ ಜಪವಚಃಪುಷ್ಪಾಣಿ ಸದ್ವಾಸನಾ
ಜ್ಞಾನಾನಂದಸುಧಾಮರಂದಲಹರೀ ಸಂವಿತ್ಫಲಾಭ್ಯುನ್ನತಿಃ ॥ ೪೭ ॥

೪೭. ಶಂಭುವಿನ ಧ್ಯಾನ ಎಂಬ ವಸಂತದ ಸಂಗವನ್ನು ಹೊಂದಿರುವ ಹೃದಯೋದ್ಯಾನದಲ್ಲಿ ಪಾಪಗಳೆಂಬ ಹಣ್ಣೆಲೆಗಳು ಉದುರಿಹೋದುವು. ಭಕ್ತಿಲತೆಗಳ ಗುಂಪುಗಳು ಪುಣ್ಯಗಳೆಂಬ ಚಿಗುರಿನಿಂದ ಕೂಡಿ ಶೋಭಿಸಿದವುಗಳಾಗಿವೆ. ಸದ್ಗುಣಗಳು ಎಂಬ ಮೊಗ್ಗುಗಳು, ಜಪಮಂತ್ರಗಳೆಂಬ ಪುಷ್ಪಗಳು, ಶುಭಸಂಸ್ಕಾರಗಳು, ಅಮೃತ ಪ್ರಾಯವಾದ ಜ್ಞಾನ-ಆನಂದಗಳೆಂಬ ಮಕರಂದದ ಝರಿ-ಇವು ಬ್ರಹ್ಮಾನುಭವ ಎಂಬ ಫಲವನ್ನು ಯಥೇಷ್ಟವಾಗಿ ನೀಡಿ ಪ್ರಕಾಶಿಸುತ್ತಿವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಿತ್ಯಾನಂದರಸಾಲಯಂ ಸುರಮುನಿಸ್ವಾಂತಾಂಬುಜಾತಾಶ್ರಯಂ
ಸ್ವಚ್ಛಂ ಸದ್ದ್ವಿಜಸೇವಿತಂ ಕಲುಷಹೃತ್ಸದ್ವಾಸನಾವಿಷ್ಕೃತಮ್ ।
ಶಂಭುಧ್ಯಾನಸರೋವರಂ ವ್ರಜ ಮನೋಹಂಸಾವತಂಸ ಸ್ಥಿರಂ
ಕಿಂ ಕ್ಷುದ್ರಾಶ್ರಯಪಲ್ವಲಭ್ರಮಣಸಂಜಾತಶ್ರಮಂ ಪ್ರಾಪ್ಸ್ಯಸಿ ॥ ೪೮ ॥

೪೮. ಮನಸ್ಸೆಂಬ ಶ್ರೇಷ್ಠ ರಾಜಹಂಸವೇ, ನಿತ್ಯಾನಂದವೆಂಬ ಜಲಕ್ಕೆ ಆಲಯವಾಗಿರುವ, ದೇವತೆಗಳ ಮತ್ತು ಮುನಿಗಳ ಅಂತರಂಗವೆಂಬ ಕಮಲಗಳಿಗೆ ಆಶ್ರಯವಾಗಿರುವ, ಸ್ವಚ್ಛವಾಗಿರುವ, ಸುತ್ಪುರುಷರೆಂಬ ಹಕ್ಕಿಗಳಿಂದ ಸೇವಿತವಾದ, ಕಲಂಕವನ್ನು ಹೋಗಲಾಡಿಸುವ, ಉತ್ತಮವಾದ ಪೂರ್ವಜನ್ಮಸಂಸ್ಕಾರವೆಂಬ ಪರಿಮಳದಿಂದ ತೋರಿಸಲ್ಪಟ್ಟ, ಶಂಭುಧ್ಯಾನವೆಂಬ ಸರೋವರವನ್ನು ಸ್ಥಿರವಾಗಿ ಸೇರು. ಕ್ಷುದ್ರಜನರ ಆಶ್ರಯವೆಂಬ ಗುಂಡಿಯಲ್ಲಿ ಅಲೆಯುತ್ತ ಏತಕ್ಕೆ ಶ್ರಮಪಡುವೆ?

Sri Vidyabharathi Book Centre, Sringeri

CC-O. In Public Domain. Digitized by eGangotri

ಆನಂದಾಮೃತಪೂರಿತಾ ಹರಪದಾಂಭೋಜಾಲವಾಲೋದ್ಯತಾ
ಸ್ಥೈರ್ಯೋಪಘ್ನಮುಪೇತ್ಯ ಭಕ್ತಿಲತಿಕಾ ಶಾಖೋಪಶಾಖಾನ್ವಿತಾ ।
ಉಚ್ಚೈರ್ಮಾನಸಕಾಯಮಾನಪಟಲೀಮಾಕ್ರಮ್ಯ ನಿಷ್ಕಲ್ಮಷಾ
ನಿತ್ಯಾಭೀಷ್ಟಫಲಪ್ರದಾ ಭವತು ಮೇ ಸತ್ಕರ್ಮಸಂವರ್ಧಿತಾ ॥ ೪೯ ॥

೪೯. ಆತ್ಮಾನಂದವೆಂಬ ನೀರಿನಿಂದ ಸಂಪೂರ್ಣವಾಗಿ ನನಸಿ ಪೋಷಿಸಲ್ಪಟ್ಟ, ಹರನ ಪಾದಕಮಲವೆಂಬ ಪಾತಿಯಿಂದ ಮೊಳೆತಿರುವ, ಸ್ಥೈರ್ಯವೆಂಬ ಆಶ್ರಯ ವೃಕ್ಷವನ್ನವಲಂಬಿಸಿ ಶಾಖೋಪಶಾಖೆಗಳಿಂದ ಕೂಡಿರುವ, ದೇಹದ ಅಳತೆಯಷ್ಟು ಎತ್ತರವಾದ ಮನಸ್ಸೆಂಬ ಚಪ್ಪರದ ಮೇಲ್ಭಾಗದಲ್ಲಿ ಹಬ್ಬಿ ನಿರ್ದುಷ್ಟವಾಗಿ ಬೆಳೆದಿರುವ, ಸತ್ಕರ್ಮಗಳಿಂದ ಹುಲುಸಾಗಿ ವರ್ಧಿಸಲ್ಪಟ್ಟ ಭಕ್ತಿಯೆಂಬ ಬಳ್ಳಿಯು ನಿತ್ಯವಾದ ಇಷ್ಟಾರ್ಥಗಳೆಂಬ ಫಲಗಳನ್ನು ನನಗೆ ನೀಡಲಿ!

Sri Vidyabharathi Book Centre, Sringeri

CC-O. In Public Domain. Digitized by eGangotri

ಓಂ ಶಿವಾನಂದಲಹರೀ

ಸಂಧ್ಯಾರಂಭವಿಜೃಂಭಿತಂ ಶ್ರುತಿಶಿರಃಸ್ಥಾನಾಂತರಾಧಿಷ್ಠಿತಂ
ಸಪ್ರೇಮಭ್ರಮರಾಭಿರಾಮಮಸಕೃತ್ಸದ್ವಾಸನಾಶೋಭಿತಮ್ ।
ಭೋಗೀಂದ್ರಾಭರಣಂ ಸಮಸ್ತಸುಮನಃಪೂಜ್ಯಂ ಗುಣಾವಿಷ್ಕೃತಂ
ಸೇವೇ ಶ್ರೀಗಿರಿಮಲ್ಲಿಕಾರ್ಜುನಮಹಾಲಿಂಗಂ ಶಿವಾಲಿಂಗಿತಮ್ ॥ ಓಂ ॥

ಓಂ. ಸಂಧ್ಯೆಯು ಆರಂಭವಾಗುವ ಕಾಲದಲ್ಲಿ (ತಾಂಡವನೃತ್ಯಕ್ಕೋಸ್ಕರ) ವಿಜೃಂಭಿಸುತ್ತಿರುವ, ಉಪನಿಷತ್ತುಗಳೆಂಬ ಇತರ ಸ್ಥಾನಗಳಲ್ಲಿ ನೆಲೆಗೊಂಡಿರುವ, ಅನುರಾಗಯುಕ್ತಳಾದ ಭ್ರಮರಾಂಬಿಕೆಯ ಸಾನಿಧ್ಯದಿಂದ ಸುಂದರವಾಗಿರುವ, ಅನೇಕ (ಗಿರಿಮಲ್ಲಿಕೆಗಳ) ಸುವಾಸನೆಗಳಿಂದ ಶೋಭಿಸುತ್ತಿರುವ, ಸರ್ಪರಾಜನನ್ನು ಧರಿಸಿರುವ, ಸಮಸ್ತ ದೇವತೆಗಳಿಗೂ ಪೂಜ್ಯವಾದ, ಸದ್ಗುಣಗಳಿಂದ ಪ್ರಕಾಶಿಸುತ್ತಿರುವ, ಪಾರ್ವತಿಯಿಂದ ಆಲಿಂಗಿತವಾದ, ಶ್ರೀಗಿರಿಯಲ್ಲಿರುವ ಮಲ್ಲಿಕಾರ್ಜುನಮಹಾಲಿಂಗವನ್ನು ಭಜಿಸುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಭೃಂಗೀಚ್ಛಾನಟನೋತ್ಕಟಃ ಕರಿಮದಗ್ರಾಹೀ ಸ್ಫುರನ್ಮಾಧವಾ-
ಹ್ಲಾದೋ ನಾದಯುತೋ ಮಹಾಸಿತವಪುಃ ಪಂಚೇಷುಣಾಚಾದೃತಃ ।
ಸತ್ಪಕ್ಷಸ್ಸುಮನೋವನೇಷು ಸ ಪುನಃ ಸಾಕ್ಷಾನ್ಮದೀಯೇ ಮನೋ-
ರಾಜೀವೇ ಭ್ರಮರಾಧಿಪೋ ವಿಹರತಾಂ ಶ್ರೀಶೈಲವಾಸೀ ವಿಭುಃ ॥ ೫೧ ॥

೫೧. ಭ್ರಮರಾಂಬಿಕೆಯ ಇಚ್ಛೆಗನುಸಾರವಾಗಿ ಉತ್ಕಟನರ್ತನವನ್ನು ಮಾಡುತ್ತಿರುವ, ಗಜಾಸುರನ ಮದವನ್ನು ಸೆಳೆಯುವ, ಶೋಭಿಸುವ ವಿಷ್ಣುವಿಗೆ ಆಹ್ಲಾದವನ್ನುಂಟುಮಾಡುತ್ತಿರುವ, ಪ್ರಣವನಾದವನ್ನು ಮಾಡುತ್ತಿರುವ, ಮಹಾಪ್ರಮಾಣದ ಶ್ವೇತಕಾಯನಾಗಿರುವ, ಮನ್ಮಥನಿಂದ ಆದರಿಸಲ್ಪಟ್ಟಿರುವ, ಸತ್ಯವೆಂಬ ರೆಕ್ಕೆಯನ್ನುಳ್ಳ, ವಿಭುವೂ ಶ್ರೀಶೈಲವಾಸಿಯೂ ಆದ (ಮಲ್ಲಿಕಾರ್ಜುನನೆಂಬ) ಭ್ರಮರಾಧಿಪನು ಸತ್ಪುರುಷರ ಮನಸ್ಸೆಂಬ ವನದಲ್ಲಿಯೂ ಮತ್ತು ನನ್ನ ಮನಃಕಮಲದಲ್ಲಿಯೂ ವಿಹರಿಸಲಿ!

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾರುಣ್ಯಾಮೃತವರ್ಷಿಣಂ ಘನವಿಪದ್ಗ್ರೀಷ್ಮಚ್ಛಿದಾಕರ್ಮಠಂ
ವಿದ್ಯಾಸಸ್ಯಫಲೋದಯಾಯ ಸುಮನಸ್ಸಂಸೇವ್ಯಮಿಚ್ಛಾಕೃತಿಮ್ ।
ನೃತ್ಯದ್ಭಕ್ತಮಯೂರಮದ್ರಿನಿಲಯಂ ಚಂಚಜ್ಜಟಾಮಂಡಲಂ
ಶಂಭೋ ವಾಂಛತಿ ನೀಲಕಂಧರ ಸದಾ ತ್ವಾಂ ಮೇ ಮನಶ್ಚಾತಕಃ ॥ ೫೨ ॥

೫೨. ಹೇ ಶಂಭೋ! ನೀಲಕಂಠ! ಕರುಣೆಯೆಂಬ ನೀರನ್ನು ವರ್ಷಿಸುತ್ತಿರುವ ಘನವಾದ ವಿಪತ್ತುಗಳೆಂಬ ಬಿಸಿಲಿನ ತಾಪವನ್ನು ಹೋಗಲಾಡಿಸುವುದರಲ್ಲಿ ಕುಶಲನಾದ, (ತಮ್ಮ) ವಿದ್ಯೆಯೆಂಬ ಸಸ್ಯವು ಫಲವನ್ನು ಕೊಡಲೆಂದು ವಿದ್ವಾಂಸರಿಂದ ಸದಾ ಸೇವಿಸಲ್ಪಡುವವನಾದ, ಸ್ವೇಚ್ಛೆಯಿಂದ ಕರ್ಮವನ್ನು ಮಾಡಬಲ್ಲ, ನರ್ತಿಸುತ್ತಿರುವ ಭಕ್ತಮಯೂರವನ್ನುಳ್ಳ, ಬೆಟ್ಟವನ್ನು ಆಶ್ರಯವಾಗಿ ಹೊಂದಿರುವ, ಚಂಚಲವಾದ ಜಟೆಗಳನ್ನು ಧರಿಸಿರುವ ನಿನ್ನನ್ನು ನನ್ನ ಮನಸ್ಸೆಂಬ ಚಾತಕಪಕ್ಷಿಯು ಸದಾ ಇಚ್ಛಿಸುವುದು.

CC-O. In Public Domain. Digitized by eGangotri

ಆಕಾಶೇನ ಶಿಖೀ ಸಮಸ್ತಫಣಿನಾಂ ನೇತ್ರಾ ಕಲಾಪೀ ನತಾ-
ನುಗ್ರಾಹಿಪ್ರಣವೋಪದೇಶನಿನದೈಃ ಕೇಕೀತಿ ಯೋ ಗೀಯತೇ ।
ಶ್ಯಾಮಾಂ ಶೈಲಸಮುದ್ಭವಾಂ ಘನರುಚಿಂ ದೃಷ್ಟ್ವಾ ನಟಂತಂ ಮುದಾ
ವೇದಾಂತೋಪವನೇ ವಿಹಾರರಸಿಕಂ ತಂ ನೀಲಕಂಠಂ ಭಜೇ ॥ ೫೩ ॥

೫೩. ಆಕಾಶವನ್ನು ಕೇಶವಾಗಿ ಹೊಂದಿರುವುದರಿಂದ ಶಿಖಿಯೆಂದೂ, ಸರ್ಪ ರಾಜನನ್ನು ಪುಚ್ಛದಂತೆ ಧರಿಸಿರುವುದರಿಂದ ಕಲಾಪಿಯೆಂದೂ, ನಮಸ್ಕರಿಸಿದವರನ್ನು ಅನುಗ್ರಹಿಸುವ ಪ್ರಣವೋಪದೇಶದ ಶಬ್ದದಿಂದ ಕೂಡಿರುವ ಕಾರಣ ಕೇಕೆ ಯುಳ್ಳವನೆಂದೂ ಯಾವನು ಸ್ತುತಿಸಲ್ಪಡುತ್ತಾನೆಯೋ ಅಂಥ, ಶ್ಯಾಮಲವರ್ಣಳೂ, ಘನಸುಂದರಿಯೂ ಆದ ಶೈಲಜೆಯನ್ನು ನೋಡಿ ಆನಂದದಿಂದ ನರ್ತಿಸುತ್ತಿರುವ, ವೇದಾಂತವೆಂಬ ಉಪವನದಲ್ಲಿ ವಿಹಾರರಸಿಕನಾದ ನೀಲಕಂಠನೆಂಬ ನವಿಲನ್ನು ಭಜಿಸುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಧ್ಯಾ ಘರ್ಮದಿನಾತ್ಯಯೋ ಹರಿಕರಾಘಾತಪ್ರಭೂತಾನಕ-
ಧ್ವಾನೋ ವಾರಿದಗರ್ಜಿತಂ ದಿವಿಷದಾಂ ದೃಷ್ಟಿಚ್ಛಟಾ ಚಂಚಲಾ ।
ಭಕ್ತಾನಾಂ ಪರಿತೋಷಬಾಷ್ಪವಿತತಿರ್ವೃಷ್ಟಿರ್ಮಯೂರೀ ಶಿವಾ
ಯಸ್ಮಿನ್ನುಜ್ಜ್ವಲತಾಂಡವಂ ವಿಜಯತೇ ತಂ ನೀಲಕಂಠಂ ಭಜೇ ॥ ೫೪ ॥

೫೪. ಸಂಧ್ಯಾಕಾಲವೇ ಗ್ರೀಷ್ಮದಿನಗಳ ಕೊನೆ. ಹರಿಯು ತನ್ನ ಕೈಗಳಿಂದಲೇ ಬಾರಿಸುತ್ತಿರುವ ದೊಡ್ಡ ಮದ್ದಲೆಯ ಶಬ್ದವೇ ಮೇಘಗರ್ಜನೆ. (ನೋಡುತ್ತಿರುವ) ದೇವತೆಗಳ ಕಣ್ಣಿನ ಕಾಂತಿಯೇ ಮಿಂಚು. ಭಕ್ತರು ಸಂತೋಷದಿಂದ ಸುರಿಸುತ್ತಿರುವ ಅಶ್ರುಗಳೇ ಮಳೆ. ಪಾರ್ವತಿಯೇ ಹೆಣ್ಣುನವಿಲು. ಇಂಥ ಸ್ಥಿತಿಯಲ್ಲಿ ಯಾವನ ಉಜ್ವಲವಾದ ತಾಂಡವನೃತ್ಯವು ವಿಜೃಂಭಿಸುತ್ತಿದೆಯೋ ಅಂಥ ನೀಲಕಂಠನೆಂಬ ನವಿಲನ್ನು ಭಜಿಸುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆದ್ಯಾಯಾಮಿತತೇಜಸೇ ಶ್ರುತಿಪದೈರ್ವೇದ್ಯಾಯ ಸಾಧ್ಯಾಯ ತೇ
ವಿದ್ಯಾನಂದಮಯಾತ್ಮನೇ ತ್ರಿಜಗತಸ್ಸಂರಕ್ಷಣೋದ್ಯೋಗಿನೇ ।
ಧ್ಯೇಯಾಯಾಖಿಲಯೋಗಿಭಿಸ್ಸುರಗಣೈರ್ಗೇಯಾಯ ಮಾಯಾವಿನೇ
ಸಮ್ಯಕ್ತಾಂಡವಸಂಭ್ರಮಾಯ ಜಟಿನೇ ಸೇಯಂ ನತಿಶ್ಶಂಭವೇ ॥ ೫೫ ॥

೫೫. ಆದಿಕಾರಣನಾದ, ಅಮಿತತೇಜೋಯುಕ್ತನಾದ, ಶ್ರುತಿಯ ಪದಗಳಿಂದ ತಿಳಿದುಬರತಕ್ಕ, ಸಕಲಸಾಧನಗಳಿಗೆ ಏಕಮಾತ್ರಲಕ್ಷ್ಯನಾದ, ಜ್ಞಾನಾನಂದಮಯನಾದ, ಮೂಜಗಗಳನ್ನೂ ಸಂರಕ್ಷಿಸುವುದರಲ್ಲಿ ತೊಡಗಿರುವ, ಧ್ಯಾನಯೋಗ್ಯನಾದ, ಸಕಲ ಯೋಗಿಗಳಿಂದಲೂ ದೇವತೆಗಳಿಂದಲೂ ಸ್ತುತಿಸಲ್ಪಡುತ್ತಿರುವ, ಮಾಯಾಧೀಶನಾದ ಉತ್ತಮವಾದ ತಾಂಡವನಾಟ್ಯದ ಆನಂದಾತಿರೇಕವುಳ್ಳವನಾದ, ಜಟಾಧಾರಿಯಾದ, ಶಂಭುವಾದ ನಿನಗೆ ಈ ನಮಸ್ಕಾರವಿರಲಿ!

Sri Vidyabharathi Book Centre, Sringeri

CC-O. In Public Domain. Digitized by eGangotri

ನಿತ್ಯಾಯ ತ್ರಿಗುಣಾತ್ಮನೇ ಪುರಜಿತೇ ಕಾತ್ಯಾಯನೀಶ್ರೇಯಸೇ
ಸತ್ಯಾಯಾದಿಕುಟುಂಬಿನೇ ಮುನಿಮನಃಪ್ರತ್ಯಕ್ಷಚಿನ್ಮೂರ್ತಯೇ ।
ಮಾಯಾಸೃಷ್ಟಜಗತ್ತ್ರಯಾಯ ಸಕಲಾಮ್ನಾಯಾಂತಸಂಚಾರಿಣೇ
ಸಾಯಂತಾಂಡವಸಂಭ್ರಮಾಯ ಜಟಿನೇ ಸೇಯಂ ನತಿಃ ಶಂಭವೇ ॥ ೫೬ ॥

೫೬. ನಿತ್ಯನೂ ತ್ರಿಗುಣಾತ್ಮನೂ ತ್ರಿಪುರಧ್ವಂಸಿಯೂ ಕಾತ್ಯಾಯನಿಗೆ ಶ್ರೇಯೋ ರೂಪನೂ ಸತ್ಯಸ್ವರೂಪಿಯೂ, ಆದಿಕುಟುಂಬಿಯೂ, ಮುನಿಗಳ ಮನಸ್ಸಿನಲ್ಲಿ ಪ್ರಕಟವಾದ ಚಿನ್ಮೂರ್ತಿಯುಳ್ಳವನೂ, ಮಾಯೆಯಿಂದ ತ್ರಿಲೋಕಗಳನ್ನು ಸೃಷ್ಟಿಸುವವನೂ, ಸಕಲ ವೇದಾಂತಪ್ರತಿಪಾದ್ಯನೂ, ಸಾಯಂನೃತ್ಯದಲ್ಲಿ ತೊಡಗಿರುವವನೂ, ಜಟಾಧಾರಿಯೂ ಆದ ಶಂಭುವಿಗೆ ಈ ನಮಸ್ಕಾರವಿರಲಿ!

Sri Vidyabharathi Book Centre, Sringeri

CC-O. In Public Domain. Digitized by eGangotri

ನಿತ್ಯಂ ಸ್ವೋದರಪೂರಣಾಯ ಸಕಲಾನುದ್ದಿಶ್ಯ ವಿತ್ತಾಶಯಾ
ವ್ಯರ್ಥಂ ಪರ್ಯಟನಂ ಕರೋಮಿ ಭವತಸ್ಸೇವಾಂ ನ ಜಾನೇ ವಿಭೋ ।
ಮಜ್ಜನ್ಮಾಂತರಪುಣ್ಯಪಾಕಬಲತಸ್ತ್ವಂ ಶರ್ವ ಸರ್ವಾಂತರ-
ಸ್ತಿಷ್ಠಸ್ಯೇವ ಹಿ ತೇನ ವಾ ಪಶುಪತೇ ರಕ್ಷ್ಯೋಽಸ್ಮ್ಯಹಮ್ ॥ ೫೭ ॥

೫೭. ಎಲೈ ವಿಭುವೇ, ನನ್ನ ಉದರಪೋಷಣಕ್ಕಾಗಿ ಧನಾಪೇಕ್ಷೆಯಿಂದ ಕೂಡಿ ಎಲ್ಲರ ಬಳಿಗೂ ವ್ಯರ್ಥವಾಗಿ ಅಲೆಯುತ್ತಿರುವೆನು, ನಿನ್ನ ಸೇವೆಯನ್ನು ಮಾತ್ರ ಅರಿತಿಲ್ಲ ! ಹೇ ಶರ್ವನೇ, ಪಶುಪತಿ, ನನ್ನ ಜನ್ಮಾಂತರದ ಪುಣ್ಯಪರಿಪಾಕದಿಂದ ನೀನು ಸರ್ವಾಂತರ್ಯಾಮಿಯಾಗಿ (ನನ್ನೊಳಗೂ) ಇರುವೆ. ಆದುದರಿಂದ ನಾನು ನಿನ್ನಿಂದ ರಕ್ಷಿಸಲ್ಪಡಲು ಯೋಗ್ಯನೇ.

Sri Vidyabharathi Book Centre, Sringeri

CC-O. In Public Domain. Digitized by eGangotri

ಏಕೋ ವಾರಿಜಬಾಂಧವಃ ಕ್ಷಿತಿನಭೋವ್ಯಾಪ್ತಂ ತಮೋಮಂಡಲಂ
ಭಿತ್ವಾ ಲೋಚನಗೋಚರೋಽಪಿ ಭವತಿ ತ್ವಂ ಕೋಟಿಸೂರ್ಯಪ್ರಭಃ ।
ವೇದ್ಯಃ ಕಿಂ ನ ಭವಸ್ಯಹೋ ಘನತರಂ ಕೀದೃಗ್ಭವೇನ್ಮತ್ತಮ-
ಸ್ತತ್ಸರ್ವಂ ವ್ಯಪನೀಯ ಮೇ ಪಶುಪತೇ ಸಾಕ್ಷಾತ್ಪ್ರಸನ್ನೋ ಭವ ॥ ೫೮ ॥

೫೮. ಹೇ ಪಶುಪತಿ, ಸೂರ್ಯನು ಒಬ್ಬನೇ ಆಗಿದ್ದರೂ ಭೂಮ್ಯಾಕಾಶಗಳನ್ನು ವ್ಯಾಪಿಸಿಕೊಂಡಿರುವ ಕತ್ತಲೆಯ ಮಂಡಲವನ್ನು ಭೇದಿಸಿ ಕಣ್ಣಿಗೆ ಕಾಣಿಸಿಕೊಳ್ಳುತ್ತಾನೆ. ಆದರೆ ಕೋಟಿಸೂರ್ಯಪ್ರಭೆಯುಳ್ಳವನಾಗಿದ್ದರೂ ನೀನೇಕೆ (ನನಗೆ) ತಿಳಿದು ಬರುತ್ತಿಲ್ಲ? ನನ್ನ ಅಜ್ಞಾನಾಂಧಕಾರವು ಅದೆಷ್ಟು ನಿಬಿಡತರವಾಗಿರಬಹುದು! ಅದೆಲ್ಲವನ್ನೂ (ಕಾರುಣ್ಯದಿಂದ) ಹೋಗಲಾಡಿಸಿ ನೇರವಾಗಿ ಪ್ರಸನ್ನನಾಗು!

Sri Vidyabharathi Book Centre, Sringeri

CC-O. In Public Domain. Digitized by eGangotri

ಹಂಸಃ ಪದ್ಮವನಂ ಸಮಿಚ್ಛತಿ ಯಥಾ ನೀಲಾಂಬುದಂ ಚಾತಕಃ
ಕೋಕಃ ಕೋಕನದಪ್ರಿಯಂ ಪ್ರತಿದಿನಂ ಚಂದ್ರಂ ಚಕೋರಸ್ತಥಾ ।
ಚೇತೋ ವಾಂಛತಿ ಮಾಮಕಂ ಪಶುಪತೇ ಚಿನ್ಮಾರ್ಗಮೃಗ್ಯಂ ವಿಭೋ
ಗೌರೀನಾಥ ಭವತ್ಪದಾಬ್ಜಯುಗಲಂ ಕೈವಲ್ಯಸೌಖ್ಯಪ್ರದಮ್ ॥ ೫೯.॥

೫೯. ಎಲ್ಲೆ ಪಶುಪತಿ, ಗೌರೀನಾಥ, ಹಂಸವು ಪದ್ಮವನವನ್ನೂ, ಚಾತಕಪಕ್ಷಿಯು ನೀಲಮೇಘವನ್ನೂ, ಚಕ್ರವಾಕವು ಸೂರ್ಯನನ್ನೂ, ಚಕೋರವು ಚಂದ್ರನನ್ನೂ, ಹೇಗೆ ಪ್ರತಿದಿನವೂ ಇಚ್ಛಿಸುತ್ತವೆಯೋ ಹಾಗೆಯೇ ಚಿನ್ಮಾರ್ಗದಿಂದ ಅರಸಲ್ಪಟ್ಟಿ ಮತ್ತು ಮೋಕ್ಷಸುಖವನ್ನು ಕೊಡುವ ನಿನ್ನ ಪಾದಕಮಲಯುಗ್ಮವನ್ನು ನನ್ನ ಚಿತ್ತವು ಅಪೇಕ್ಷಿಸುತ್ತಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ರೋಧಸ್ತೋಯಹೃತಃ ಶ್ರಮೇಣ ಪಥಿಕಶ್ಛಾಯಾಂ ತರೋರ್ವೃಷ್ಟಿತೋ
ಭೀತಃ ಸ್ವಸ್ಥಗೃಹಂ ಗೃಹಸ್ಥಮತಿಥಿರ್ದೀನಃ ಪ್ರಭುಂ ಧಾರ್ಮಿಕಮ್ ।
ದೀಪಂ ಸಂತಮಸಾಕುಲಶ್ಚ ಶಿಖಿನಂ ಶೀತಾವೃತಸ್ತ್ವಂ ತಥಾ
ಚೇತಃ ಸರ್ವಭಯಾಪಹಂ ವ್ರಜ ಸುಖಂ ಶಂಭೋಃ ಪದಾಂಭೋರುಹಮ್ ॥ ೬೦ ॥

೬೦. ನೀರಿನಲ್ಲಿ ಸಿಕ್ಕಿಕೊಂಡಿರುವವನು ದಡವನ್ನೂ, ಆಯಾಸಹೊಂದಿದ ದಾರಿಹೋಕನು ಮರದ ನೆರಳನ್ನೂ, ಮಳೆಯಿಂದ ಹೆದರಿದವನು ಒಳ್ಳೆಯ ಮನೆಯನ್ನೂ, ಅತಿಥಿಯು ಗೃಹಸ್ಥನನ್ನೂ, ದೀನನು ಧಾರ್ಮಿಕನಾದ ಪ್ರಭುವನ್ನೂ, ಗಾಢಾಂಧಕಾರದಿಂದ ತೊಳಲುತ್ತಿರುವವನು ದೀಪವನ್ನೂ, ಚಳಿಯಲ್ಲಿ ನಡುಗುತ್ತಿರುವವನು ಬೆಂಕಿಯನ್ನೂ ಹೇಗೆ ಆಶ್ರಯಿಸುವನೋ ಹಾಗೆಯೇ, ಎಲ್ಮೆ ನನ್ನ ಮನಸ್ಸೇ, ಸಕಲ ಭಯ ನಿವಾರಕವಾದ ಶಂಭುವಿನ ಪಾದಾರವಿಂದವನ್ನು ಆಶ್ರಯಿಸು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂಕೋಲಂ ನಿಜಬೀಜಸಂತತಿರಯಸ್ಕಾಂತೋಪಲಂ ಸೂಚಿಕಾ
ಸಾಧ್ವೀ ನೈಜವಿಭುಂ ಲತಾ ಕ್ಷಿತಿರುಹಂ ಸಿಂಧುಃ ಸರಿದ್ವಲ್ಲಭಮ್ ।
ಪ್ರಾಪ್ನೋತೀಹ ಯಥಾ ತಥಾ ಪಶುಪತೇಃ ಪಾದಾರವಿಂದದ್ವಯಂ
ಚೇತೋವೃತ್ತಿರುಪೇತ್ಯ ತಿಷ್ಠತಿ ಸದಾ ಸಾ ಭಕ್ತಿರಿತ್ಯುಚ್ಯತೇ ॥ ೬೧॥

೬೧. ಈ ಲೋಕದಲ್ಲಿ ಅಂಕೋಲದ ಬೀಜಗಳು ಪುನಃ ಅದೇ ಮರವನ್ನೂ, ಸೂಜಿಯು ಅಯಸ್ಕಾಂತಶಿಲೆಯನ್ನೂ, ಪತಿವ್ರತೆಯು ತನ್ನ ಪತಿಯನ್ನೂ, ಬಳ್ಳಿಯು ಮರವನ್ನೂ, ನದಿಯು ಸಮುದ್ರವನ್ನೂ ಹೇಗೆ ಆಶ್ರಯಿಸುತ್ತವೆಯೋ ಹಾಗೆ ಮನೋವೃತ್ತಿಯು ಪಶುಪತಿಯ ಪಾದಾರವಿಂದದ್ವಯವನ್ನು ಬಳಿಸಾರಿ ಸದಾ ಅವುಗಳಲ್ಲಿ ನಿಂತರೆ ಅದು ಭಕ್ತಿಯೆನ್ನಿಸುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆನಂದಾಶ್ರುಭಿರಾತನೋತಿ ಪುಲಕಂ ನೈರ್ಮಲ್ಯತಶ್ಚಾದನಂ
ವಾಚಾಶಂಖಮುಖೇ ಸ್ಥಿತೈಶ್ಚ ಜಠರಾಪೂರ್ತಿಂ ಚರಿತ್ರಾಮೃತೈಃ ।
ರುದ್ರಾಕ್ಷೈರ್ಭಸಿತೇನ ದೇವ ವಪುಷೋ ರಕ್ಷಾಂ ಭವದ್ಧ್ಯಾನಾ-
ಪರ್ಯಂಕೇ ವಿನಿವೇಶ್ಯ ಭಕ್ತಿಜನನೀ ಭಕ್ತಾರ್ಭಕಂ ರಕ್ಷತಿ ॥ ೬೨॥

೬೨. ಎಲ್ಮೆ ದೇವನೇ, ಭಕ್ತಿ ಎಂಬ ಮಾತೆಯು ಭಕ್ತನೆಂಬ ಮಗುವಿಗೆ ಆನಂದಬಾಷ್ಪಗಳಿಂದ ರೋಮಾಂಚನವನ್ನುಂಟುಮಾಡುವಳು, ನೈರ್ಮಲ್ಯವೆಂಬ ಹೊದಿಕೆಯನ್ನು ಹೊದಿಸುವಳು, ವಾಕ್ ಎಂಬ ಶಂಖದ ಕೊನೆಯಿಂದ ನಿನ್ನ ಚರಿತಾಮೃತವನ್ನು ಹೊಟ್ಟೆ ತುಂಬುವವರೆಗೆ ಕುಡಿಸುವಳು, ರುದ್ರಾಕ್ಷದಿಂದಲೂ ಭಸ್ಮದಿಂದಲೂ ದೇಹವನ್ನು ರಕ್ಷಿಸುವಳು, ನಿನ್ನ ಧ್ಯಾನವೆಂಬ ಮಂಚದಲ್ಲಿ ಇರಿಸಿ ಸಂರಕ್ಷಿಸುವಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾರ್ಗಾವರ್ತಿತಪಾದುಕಾ ಪಶುಪತೇರಂಗಸ್ಯ ಕೂರ್ಚಾಯತೇ
ಗಂಡೂಷಾಂಬುನಿಷೇಚನಂ ಪುರರಿಪೋರ್ದಿವ್ಯಾಭಿಷೇಕಾಯತೇ ।
ಕಿಂಚಿದ್ಭಕ್ಷಿತಮಾಂಸಶೇಷಕಬಲಂ ನವ್ಯೋಪಹಾರಾಯತೇ
ಭಕ್ತಿಃ ಕಿಂ ನ ಕರೋತ್ಯಹೋ ವನಚರೋ ಭಕ್ತಾವತಂಸಾಯತೇ ॥ ೬೩ ॥

೬೩. ನಡೆದು ಸವೆದ ಪಾದರಕ್ಷೆಯು ಪಶುಪತಿಯ ಶರೀರಕ್ಕೆ ದರ್ಭೆಯಾಗುವುದು. ಉಗುಳಿದ ನೀರು ತ್ರಿಪುರಾಂತಕನಿಗೆ ದಿವ್ಯಾಭಿಷೇಕವಾಗುವುದು. ಸ್ವಲ್ಪ ತಿಂದುಳಿದ ಮಾಂಸದ ತುಂಡು ಹೊಸ ನೈವೇದ್ಯವಾಗುತ್ತದೆ. ಬೇಡನು ಭಕ್ತ ಶ್ರೇಷ್ಠನಾಗುತ್ತಾನೆ. ಆಶ್ಚರ್ಯ! ಭಕ್ತಿಯು ಏನನ್ನು ತಾನೇ ಮಾಡಲಾರದು!*

*ಪರಿಶಿಷ್ಟವನ್ನು ನೋಡಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ವಕ್ಷಸ್ತಾಡನಮಂತಕಸ್ಯ ಕಠಿನಾಪಸ್ಮಾರಸಂಮರ್ದನಂ
ಭ್ರೂಭೃತ್ಪರ್ಯಟನಂ ನಮತ್ಸುರಶಿರಃಕೋಟೀರಸಂಘರ್ಷಣಮ್ ।
ಕರ್ಮೇದಂ ಮೃದುಲಸ್ಯ ತಾವಕಪದದ್ವಂದ್ವಸ್ಯ ಕಿಂ ವೋಚಿತಂ
ಮಚ್ಚೇತೋಮಣಿಪಾದುಕಾವಿಹರಣಂ ಶಂಭೋ ಸದಾಂಗೀಕುರು ॥ ೬೪ ॥

೬೪. ಎಲ್ಮೆ ಶಂಭುವೇ, ಯಮನ ಎದೆಯನ್ನು ಒದೆಯುವಿಕೆ, ಕಠಿನನಾದ ಅಪಸ್ಮಾರಾಸುರನನ್ನು ಮರ್ದಿಸುವಿಕೆ, ಬೆಟ್ಟದಲ್ಲಿ ಅಲೆತ, ನಮಸ್ಕರಿಸುತ್ತಿರುವ ದೇವತೆಗಳ ತಲೆಯ ಮೇಲಿರುವ ಕಿರೀಟಗಳ ಉಜ್ಜುವಿಕೆ-ಎಂಬ ಈ ಕೆಲಸಗಳು ನಿನ್ನ ಮೃದುವಾದ ಪಾದಯುಗ್ಮಕ್ಕೆ ಯುಕ್ತವೇ? (ಸರ್ವಥಾ ಅಲ್ಲ); (ಆದುದರಿಂದ) ಸದಾ ನನ್ನ ಮನಸ್ಸೆಂಬ ರತ್ನದಿಂದ ಮಾಡಿದ ಪಾದುಕೆಯನ್ನು ಮೆಟ್ಟಿಕೊಂಡು ಸಂಚರಿಸುವಿಕೆಯನ್ನು ಅಂಗೀಕರಿಸು.

Sri Vidyabharathi Book Centre, Sringeri

CC-O. In Public Domain. Digitized by eGangotri

ವಕ್ಷಸ್ತಾಡನಶಂಕಯಾ ವಿಚಲಿತೋ ವೈವಸ್ವತೋ ನಿರ್ಜರಾಃ
ಕೋಟೀರೋಜ್ಜ್ವಲರತ್ನದೀಪಕಲಿಕಾನೀರಾಜನಂ ಕುರ್ವತೇ ।
ದೃಷ್ಟ್ವಾ ಮುಕ್ತಿವಧೂಸ್ತನೋತಿ ನಿಭೃತಾಶ್ಲೇಷಂ ಭವಾನೀಪತೇ
ಯಚ್ಚೇತಸ್ತವ ಪಾದಪದ್ಮಭಜನಂ ತಸ್ಯೇಹ ಕಿಂ ದುರ್ಲಭಮ್ ॥ ೬೫ ॥

೬೫. ಹೇ ಭವಾನೀಪತೇ, ಯಾರ ಮನಸ್ಸು ನಿನ್ನ ಪಾದಪದ್ಮದ ಸೇವೆಯಲ್ಲಿ ನಿರತವಾಗಿರುವುದೋ ಅಂಥವರಿಗೆ ಯಾವುದು ತಾನೇ ದುರ್ಲಭ? ನೀನೆಲ್ಲಿ ತನ್ನ ಎದೆಯನ್ನು ಒದೆಯುವಿಯೋ ಎಂದು ಹೆದರಿ ಯಮನು ಅವರ ಬಳಿಯಿಂದ ಓಡಿಹೋಗುತ್ತಾನೆ. ದೇವತೆಗಳು ತಮ್ಮ ಕಿರೀಟಗಳಲ್ಲಿರುವ ರತ್ನಗಳೆಂಬ ದೀಪಗಳಿಂದ ಅವನಿಗೆ ಆರತಿಯೆತ್ತುತ್ತಾರೆ. ಮುಕ್ತಿವಧುವು ಅವನನ್ನು ನೋಡಿ ಗಾಢಾಲಿಂಗನವನ್ನು ನೀಡುತ್ತಾಳೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕ್ರೀಡಾರ್ಥಂ ಸೃಜಸಿ ಪ್ರಪಂಚಮಖಿಲಂ ಕ್ರೀಡಾಮೃಗಾಸ್ತೇ ಜನಾ
ಯತ್ಕರ್ಮಾಚರಿತಂ ಮಯಾ ಚ ಭವತಃ ಪ್ರೀತ್ಯೈ ಭವತ್ಯೇವ ತತ್ ।
ಶಂಭೋ ಸ್ವಸ್ಯ ಕುತೂಹಲಸ್ಯ ಕರಣಂ ಮಚ್ಚೇಷ್ಟಿತಂ ನಿಶ್ಚಿತಂ
ತಸ್ಮಾನ್ನಾಮಕರಕ್ಷಣಂ ಪಶುಪತೇ ಕರ್ತವ್ಯಮೇವ ತ್ವಯಾ ॥ ೬೬ ॥

೬೬. ಎಲೈ ಶಂಭು, ನೀನು ಸಕಲಪ್ರಪಂಚವನ್ನೂ ಕ್ರೀಡೆಗಾಗಿ ರಚಿಸುತ್ತೀಯೆ. ಜನರೆಲ್ಲರೂ ನಿನಗೆ ಕ್ರೀಡೆಯ ಮೃಗಗಳು. ಯಾವ ಕರ್ಮವು ನನ್ನಿಂದ ಆಚರಿಸಲ್ಪಟ್ಟಿತೋ ಅದು ನಿನ್ನ ಪ್ರೀತಿಗಾಗಿಯೇ. ಹೇ ಪಶುಪತಿ, ನನ್ನ ಕರ್ಮವೆಲ್ಲ ಕ್ರೀಡೆಯಲ್ಲಿರುವ ನಿನ್ನ ಔತ್ಸುಕ್ಯದ ಪರಿಣಾಮವೇ ಆಗಿದೆ. ಇದು ನಿಶ್ಚಯ. ಆದುದರಿಂದ ನನ್ನ ರಕ್ಷಣವು ನಿನ್ನ ಕರ್ತವ್ಯವೇ ಆಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಬಹುವಿಧಪರಿತೋಷಬಾಷ್ಪಪೂರ-
ಸ್ಫುಟಪುಲಕಾಂಕಿತಚಾರುಭೋಗಭೂಮಿಮ್ ।
ಚಿರಪದಫಲಕಾಂಕ್ಷಿಸೇವ್ಯಮಾನಾಂ
ಪರಮಸದಾಶಿವಭಾವನಾಂ ಪ್ರಪದ್ಯೇ ॥ ೬೭ ॥

೬೭. ಸಂತೋಷಬಾಷ್ಪದ ಪ್ರವಾಹದಿಂದ ನೆನೆಯಿಸಲ್ಪಟ್ಟು ಬಹುವಿಧವಾಗಿ ಮೊಳೆತ, ರೋಮಾಂಚವೆಂಬ ಮೊಗ್ಗುಗಳಿಂದ ಕೂಡಿ ಆನಂದಾನುಭವಕ್ಕೆ ಆಸರೆಯಾದ, ಮೋಕ್ಷವೆಂಬ ಫಲವನ್ನು ಬಯಸುತ್ತಿರುವವರಿಂದ ಸೇವಿಸಲ್ಪಡುತ್ತಿರುವ, ಸದಾಶಿವನ ಏಕಾಂತಭಾವನೆಯೆಂಬ ದಿವ್ಯಲತೆಯನ್ನು ಶರಣುಹೊಂದುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಮಿತಮುದಮೃತಂ ಮುಹುರ್ದುಹಂತೀಂ
ವಿಮಲಭವತ್ಪದಗೋಷ್ಠಮಾವಸಂತೀಮ್ ।
ಪದಯ ಪಶುಪತೇ ಸುಪುಣ್ಯಪಾಕಾಂ
ಮಮ ಪರಿಪಾಲಯ ಭಕ್ತಿಧೇನುಮೇಕಾಮ್ ॥ ೬೮ ॥

೬೮. ಹೇ ದಯಾಳು, ಪಶುಪತಿ, ಅಮಿತವಾದ ಆನಂದಾಮೃತವನ್ನು ಬ್ಹಾರಿ ಬಾರಿಗೂ ಕರೆಯುತ್ತಿರುವ, ಪರಿಶುದ್ಧವಾದ ನಿನ್ನ ಪಾದಗಳೆಂಬ ಹಟ್ಟಿಯಲ್ಲಿ ವಾಸಿಸುತ್ತಿರುವ, ನನ್ನ ಸುಪುಣ್ಯವೆಂಬ ಕರುವನ್ನುಳ್ಳ, ಭಕ್ತಿಯೆಂಬ ನನ್ನ ಒಂದು ಹಸುವನ್ನು ನೀನು ದಯೆಯಿಂದ ಪರಿಪಾಲಿಸು.

Sri Vidyabharathi Book Centre, Sringeri

CC-O. In Public Domain. Digitized by eGangotri

ಜಡತಾ ಪಶುತಾ ಕಲಂಕಿತಾ
ಕುಟಿಲಚರತ್ವಂ ಚ ನಾಸ್ತಿ ಮಯಿ ದೇವ ।
ಅಸ್ತಿ ಯದಿ ರಾಜಮೌಲೇ
ಭವದಾಭರಣಸ್ಯ ನಾಸ್ಮಿ ಕಿಂ ಪಾತ್ರಮ್ ॥ ೬೯ ॥

೬೯. ಹೇ ದೇವ, ನನ್ನಲ್ಲಿ ಜಡತ್ವವಾಗಲೀ, ಪಶುತ್ವವಾಗಲೀ, ಕಲಂಕವಾಗಲೀ, ಕುಟಿಲಾಚರಣವಾಗಲೀ ಇಲ್ಲ. ಇದೆಯೆಂದಿಟ್ಟುಕೊಂಡರೆ, ಹೇ ಚಂದ್ರಮೌಲಿಯೇ- (ಕಲಂಕಿತ-ಚಂದ್ರನು ನಿನ್ನ ಶಿರೋಭೂಷಣವಾಗಿರುವಂತೆ, ಪಶುತ್ವವುಳ್ಳ ನಂದಿಯು ನಿನ್ನ ವಾಹನವಾಗಿ ನಿನ್ನನ್ನು ಮಂಡಿಸಿದಂತೆ, ಕುಟಿಲಗಮನವುಳ್ಳ ಸರ್ಪಗಳು ನಿನ್ನ ಆಭರಣಗಳಾಗಿರುವಂತೆ)—ನಿನ್ನ ಆಭರಣವಾಗಲು ನಾನು ಮಾತ್ರ ಏಕೆ ಯೋಗ್ಯ ನಾಗಲಿಲ್ಲ?

Sri Vidyabharathi Book Centre, Sringeri

CC-O. In Public Domain. Digitized by eGangotri

ಅರಹಸಿ ರಹಸಿ ಸ್ವತಂತ್ರಬುದ್ಧ್ಯಾ
ಪರಿವಸಿತುಂ ಸುಲಭಃ ಪ್ರಸನ್ನಮೂರ್ತಿಃ ।
ಅಗಣಿತಫಲದಾಯಕಃ ಪ್ರಭುರ್ಮೇ
ಜಗದಧಿಕೋ ಹೃದಿ ರಾಜಶೇಖರೋಽಸ್ತಿ ॥ ೭೦ ॥

೭೦. ಬಹಿರಂಗದಲ್ಲಾಗಲೀ, ಅಂತರಂಗದಲ್ಲಾಗಲೀ, ಸ್ವತಂತ್ರವಾದ ಬುದ್ಧಿಯಿಂದ ಸೇವಿಸುವುದಕ್ಕೆ ಸುಲಭನೂ ಪ್ರಸನ್ನಮೂರ್ತಿಯೂ ಅಗಣಿತಫಲದಾಯಕನೂ ಪ್ರಭುವೂ ಜಗತ್ತನ್ನು ಮೀರಿರುವವನೂ ಆದ ರಾಜಶೇಖರನು ನನ್ನ ಹೃದಯದಲ್ಲಿರುವನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆರೂಢಭಕ್ತಿಗುಣಕುಂಚಿತಭಾವಚಾಪ-
ಯುಕ್ತೈಶ್ಶಿವಸ್ಮರಣಬಾಣಗಣೈರಮೋಘೈಃ ।
ನಿರ್ಜಿತ್ಯ ಕಿಲ್ಬಿಷರಿಪೂನ್ವಿಜಯೀ ಸುಧೀಂದ್ರ-
ಸ್ತ್ಸಾನಂದಮಾವಹತಿ ಸುಸ್ಥಿರರಾಜಲಕ್ಷ್ಮೀಮ್ ॥ ೭೧॥

೭೧. ಏರಿಸಿದ ಭಕ್ತಿಯೆಂಬ ಹೆದೆಯಿಂದ ಬಗ್ಗಿಸಲ್ಪಟ್ಟ ಭಾವವೆಂಬ ಬಿಲ್ಲಿನೊಂದಿಗೆ ಸಂಧಿಸಲ್ಪಟ್ಟ ಶಿವಧ್ಯಾನವೆಂಬ ಅಮೋಘವಾದ ಬಾಣಗಣಗಳಿಂದ ಜ್ಞಾನಿವರ್ಯನು ಪಾಪಶತ್ರುಗಳನ್ನು ಗೆದ್ದು ವಿಜಯಿಯಾಗಿ ಸ್ಥಿರವಾದ (ಮೋಕ್ಷ ಸಾಮ್ರಾಜ್ಯ) ಲಕ್ಷ್ಮಿಯನ್ನು ಆನಂದದಿಂದ ಪಡೆಯುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಧ್ಯಾನಾಂಜನೇನ ಸಮವೇಕ್ಷ್ಯ ತಮಃಪ್ರದೇಶಂ
ಭಿತ್ತ್ವಾ ಮಹಾಬಲಿಭಿರೀಶ್ವರನಾಮಮಂತ್ರೈಃ ।
ದಿವ್ಯಾಶ್ರಿತಂ ಭುಜಗಭೂಷಣಮುದ್ವಹಂತಿ
ಯೇ ಪಾದಪದ್ಮಮಿಹ ತೇ ಶಿವ ತೇ ಕೃತಾರ್ಥಾಃ ॥ ೭೨ ॥

೭೨. ಶಿವನೇ, ಧ್ಯಾನವೆಂಬ ಅಂಜನದ ಸಹಾಯದಿಂದ ಅಜ್ಞಾನವೆಂಬ ಅಂಧಕಾರದಿಂದ ಆವೃತವಾದ ಪ್ರದೇಶವನ್ನು ನೋಡಿ, ಮಹಾಶಕ್ತಿಯುಳ್ಳ ಈಶ್ವರ ನಾಮಗಳೆಂಬ ಮಂತ್ರಗಳಿಂದ ಅದನ್ನು ಭೇದಿಸಿ, ದಿವ್ಯಾಶ್ರಿತವಾದ ನಿನ್ನ ಪಾದ ಪದ್ಮವೆಂಬ ಸರ್ಪಭೂಷಣಮಣಿಯನ್ನು ಯಾರು ಪಡೆದು ಹೊತ್ತುಕೊಂಡು ಹೋಗು ತ್ತಾರೆಯೋ ಅವರೇ ಕೃತಾರ್ಥರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಭೂದಾರತಾಮುದವಹದ್ಯದಪೇಕ್ಷಯಾ ಶ್ರೀ-
ಭೂದಾರ ಏವ ಕಿಮುತಸ್ಸುಮತೇ ಲಭಸ್ವ ।
ಕೇದಾರಮಾಕಲಿತಮುಕ್ತಿಮಹೌಷಧೀನಾಂ
ಪಾದಾರವಿಂದಭಜನಂ ಪರಮೇಶ್ವರಸ್ಯ ॥ ೭೩ ॥

೭೩. ಎಲೈ ಸುಮತಿ, ಯಾವುದರ ಅಪೇಕ್ಷೆಯಿಂದ ಶ್ರೀದೇವಿ-ಭೂದೇವಿಯರಿಗೆ ಪತಿಯಾದ ಮಹಾವಿಷ್ಣುವು ವರಾಹಾವತಾರವನ್ನು ಮಾಡಿದನೋ ಅಂತಹ, ಇಚ್ಛಿಸಲ್ಪಡುವ ಮುಕ್ತಿಯೆಂಬ ಮಹಾಸಸ್ಯಗಳಿಗೆ ಹೊಲವಾಗಿರುವ, ಪರಮೇಶ್ವರನ ಪಾದಾರವಿಂದಭಜನವನ್ನು ಹೊಂದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಶಾಪಾಶಕ್ಲೇಶದುರ್ವಾಸನಾದಿ-
ಭೇದೋದ್ಯುಕ್ತೈರ್ದಿವ್ಯಗಂಧೈರಮಂದೈಃ ।
ಆಶಾಶಾಟೀಕಸ್ಯ ಪಾದಾರವಿಂದಂ
ಚೇತಃಪೇಟೀಂ ವಾಸಿತಾಂ ಮೇ ತನೋತು ॥ ೭೪ ॥

೭೪. ದಿಗಂಬರನ ಪಾದಾರವಿಂದವು ನನ್ನ ಮನಸ್ಸೆಂಬ ಪೆಟ್ಟಿಗೆಯನ್ನು -ಆಶಾ ಪಾಶ, ಕ್ಲೇಶ, ದುರ್ವಾಸನೆ ಮೊದಲಾದುವನ್ನು ಹೋಗಲಾಡಿಸುವುದರಲ್ಲಿ ಉದ್ಯುಕ್ತ ವಾಗಿರುವ ದಿವ್ಯ ಪರಿಮಳದಿಂದ-ಯುಕ್ತವಾಗಿರುವಂತೆ ಮಾಡಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಲ್ಯಾಣಿನಂ ಸರಸಚಿತ್ರಗತಿಂ ಸವೇಗಂ
ಸರ್ವೇಂಗಿತಜ್ಞಮನಘಂ ಧ್ರುವಲಕ್ಷಣಾಢ್ಯಮ್ ।
ಚೇತಸ್ತುರಂಗಮಧಿರುಹ್ಯ ಚರ ಸ್ಮರಾರೇ
ನೇತಸ್ಸಮಸ್ತಜಗತಾಂ ವೃಷಭಾಧಿರೂಢ ॥ ೭೫ ॥

೭೫. ಎಲೈ ಸ್ಮರಾರಿ, ಸರ್ವಲೋಕಾಧಿಪತಿ, ವೃಷಭಾರೂಢನೇ, ಶುಭಕರವೂ ಸರಸಗತಿಯನ್ನುಳ್ಳದ್ದೂ ವೇಗಯುಕ್ತವೂ ಎಲ್ಲಾ ಇಂಗಿತಗಳನ್ನೂ ತಿಳಿಯುವಂಥದ್ದೂ ದೋಷರಹಿತವೂ ಶುಭಲಕ್ಷಣಗಳಿಂದ ತುಂಬಿರುವುದೂ ಆದ ನನ್ನ ಮನಸ್ಸೆಂಬ ಕುದುರೆಯನ್ನು ಏರಿ ಸಂಚರಿಸು.

Sri Vidyabharathi Book Centre, Sringeri

CC-O. In Public Domain. Digitized by eGangotri

ಭಕ್ತಿರ್ಮಹೇಶಪದಪುಷ್ಕರಮಾವಸಂತೀ
ಕಾದಂಬಿನೀವ ಕುರುತೇ ಪರಿತೋಷವರ್ಷಮ್ ।
ಸಂಪೂರಿತೋ ಭವತಿ ಯಸ್ಯ ಮನಸ್ತಟಾಕ-
ಸ್ತಜ್ಜನ್ಮಸಸ್ಯಮಖಿಲಂ ಸಫಲಂ ಚ ನಾನ್ಯತ್ ॥ ೭೬ ॥

೭೬. ಮಹೇಶನ ಪಾದವೆಂಬ ಆಕಾಶದಲ್ಲಿರುವ ಭಕ್ತಿಯು-ಮೋಡಗಳ ಸಾಲು ಮಳೆಯನ್ನು ಸುರಿಸುವಂತೆ-ಸಂತೋಷವರ್ಷವನ್ನು ಕರೆಯುತ್ತದೆ. ಯಾವನ ಮನಸ್ಸೆಂಬ ಕೆರೆಯು ಅದರಿಂದ ತುಂಬಿಹೋಗುವುದೋ ಅವನ ಜನ್ಮಸಸ್ಯಗಳೆಲ್ಲವೂ ಸಫಲವಾಗುವುವೇ ಹೊರತು ಇತರರವಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಬುದ್ಧಿಃ ಸ್ಥಿರಾ ಭವಿತುಮೀಶ್ವರಪಾದಪದ್ಮ-
ಸಕ್ತಾ ವಧೂರ್ವಿರಹಿಣೇವ ಸದಾ ಸ್ಮರಂತೀ ।
ಸದ್ಭಾವನಾಸ್ಮರಣದರ್ಶನಕೀರ್ತನಾದಿ
ಸಮ್ಮೋಹಿತೇವ ಶಿವಮಂತ್ರಜಪೇನ ವಿಂತೇ ॥ ೭೭ ॥

೭೭. ಹೇ ಪರಮಶಿವನೇ, ಪ್ರಿಯತಮನನ್ನಗಲಿದ ಸಾಧ್ವಿಯು ತನ್ನ ಚಂಚಲವಾದ ಮನಸ್ಸನ್ನು ಸ್ಥಿರವಾಗಿಡುವುದಕ್ಕೆ ತನ್ನ ಪತಿಯ ಪಾದಾರವಿಂದಗಳಲ್ಲಿ ನೆಟ್ಟ ಮನಸ್ಸುಳ್ಳವಳಾಗಿ, ಅವನನ್ನೇ ಸ್ಮರಿಸುತ್ತ, ಶಿವಮಂತ್ರವನ್ನು ಜಪಿಸುತ್ತ, ಒಳ್ಳೆಯ ವಿಷಯಗಳನ್ನೇ ಸ್ಮರಿಸುವುದು, ಭಾವಿಸುವುದು, ನೋಡುವುದು, ವರ್ಣಿಸುವುದು, ಇತ್ಯಾದಿಗಳನ್ನು ಹೇಗೆ ಮಾಡುವಳೊ ಹಾಗೆಯೇ ನನ್ನ ಬುದ್ಧಿಯು ನಿನ್ನ ವಿಯೋಗ ದುಃಖದಿಂದ ಭ್ರಮೆ ಹೊಂದಿದಂತೆ ಇದ್ದು, ಈಶ್ವರನಾದ ನಿನ್ನ ಪಾದಪದ್ಮದಲ್ಲಿ ಸಕ್ತವಾಗಿ, ಅದನ್ನೇ ಸ್ಮರಿಸುತ್ತ, ತನ್ನನ್ನು ಸ್ಥಿರವಾಗಿರಿಸುವುದಕ್ಕಾಗಿ ಶಿವಮಂತ್ರವನ್ನು ಜಪಿಸುತ್ತ, ಸದ್ಭಾವನೆ ಮತ್ತು ಸ್ಮರಣ ದರ್ಶನ ಕೀರ್ತನಾದಿ ಉಪಾಯಗಳನ್ನು ಆಶ್ರಯಿಸುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸದುಪಚಾರವಿಧಿಷ್ವನುಬೋಧಿತಾಂ
ಸವಿನಯಾಂ ಸುಹೃದಂ ಸಮುಪಾಶ್ರಿತಾಮ್ ।
ಮಮ ಸಮುದ್ಧರ ಬುದ್ಧಿಮಿಮಾಂ ಪ್ರಭೋ
ವರಗುಣೇನ ನವೋಢವಧೂಮಿವ ॥ ೭೮ ॥

೭೮. ಎಲ್ಲೆ ಪ್ರಭುವೇ, ಸರಿಯಾದ ಉಪಚಾರ ಮಾಡುವುದರಲ್ಲಿ ಬೋಧಿಸಲ್ಪಟ್ಟಿರುವ, ವಿನಯಯುಕ್ತವಾದ, ಸ್ನೇಹಯುಕ್ತವಾದ, ಶ್ರೇಷ್ಠವಾದ ಗುಣಗಳಿಂದ ಆಶ್ರಯಿಸಲ್ಪಟ್ಟಿರುವ, ನವವಧುವಿನಂತಿರುವ ನನ್ನ ಈ ಬುದ್ಧಿಯನ್ನು ಸ್ವೀಕರಿಸಿ ಅನುಗ್ರಹಿಸು.

Sri Vidyabharathi Book Centre, Sringeri

CC-O. In Public Domain. Digitized by eGangotri

ನಿತ್ಯಂ ಯೋಗಿಮನಸ್ಸರೋಜದಲಸಂಚಾರಕ್ಷಮಸ್ತತ್ಕ್ರಮಃ
ಶಂಭೋ ತೇನ ಕಥಂ ಕಠೋರಯಮರಾಡ್ವಕ್ಷಃಕವಾಟಕ್ಷತಿಃ ।
ಅತ್ಯಂತಂ ಮೃದುಲಂ ತ್ವದಂಘ್ರಿಯುಗಲಂ ಹಾ ಮೇ ಮನಶ್ಚಿಂತಯ-
ತ್ಯೇತಲ್ಲೋಚನಗೋಚರಂ ಕುರು ವಿಭೋ ಹಸ್ತೇನ ಸಂವಾಹಯೇ ॥ ೭೯ ॥

೭೯. ಹೇ ಶಂಭು, ನಿನ್ನ ಪಾದಗಳು ನಿತ್ಯವೂ ಯೋಗಿಗಳ ಮನಸ್ಸೆಂಬ ಕಮಲ ದಳಗಳ ಮೇಲೆ ಸಂಚರಿಸಲು ಯೋಗ್ಯವಾಗಿರುವುವು. ಅಂಥ ಪಾದಗಳು ಯಮನ ಕಠೋರವಾದ ವಿಶಾಲವಾದ ಎದೆಯನ್ನು ಹೇಗೆ ಒದ್ದವು? ನಿನ್ನ ಪಾದಗಳಾದರೋ ಅತ್ಯಂತ ಮೃದುವಾಗಿವೆ. ಹಾ! ನನ್ನ ಮನಸ್ಸು ಅದನ್ನೇ ಚಿಂತಿಸುತ್ತಿದೆ! (ನಿನ್ನ) ಈ ಪಾದಗಳನ್ನು ದೃಗ್ಗೋಚರವಾಗುವಂತೆ ಮಾಡು; ಹೇ ವಿಭು, ನಾನು ಅವನ್ನು ಕೈಗಳಿಂದ ಒತ್ತುವೆನು.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಷ್ಯತ್ಯೇಷ ಜನಿಂ ಮನೋಽಸ್ಯ ಕಠಿನಂ ತಸ್ಮಿನ್ನಟಾನೀತಿ ಮದ್
ರಕ್ಷಾಯೈ ಗಿರಿಸೀಮ್ನಿ ಕೋಮಲಪದನ್ಯಾಸಃ ಪುರಾಽಭ್ಯಾಸಿತಃ ।
ನೋಚೇದ್ದಿವ್ಯಗೃಹಾಂತರೇಷು ಸುಮನಸ್ತಲ್ಪೇಷು ವೇದ್ಯಾದಿಷು
ಪ್ರಾಯಸ್ಸ್ವತ್ಸು ಶಿಲಾತಲೇಷು ನಟನಂ ಶಂಭೋ ಕಿಮರ್ಥಂ ತವ ॥ ಲಂ ॥

ಲಂ. ಏಲೈ ಶಂಭುವೇ, 'ಇವನು ಮುಂದೆ ಹುಟ್ಟುತ್ತಾನೆ, ಇವನ ಮನಸ್ಸು ಕಠಿನ, ಅದರಲ್ಲಿ ನಾನು ತಿರುಗಾಡಬೇಕಾಗುವುದು' ಎಂದು ಭಾವಿಸಿ ನನ್ನ ರಕ್ಷಣೆಗಾಗಿಯೇ ಕೈಲಾಸಪರ್ವತಪ್ರದೇಶದಲ್ಲಿ ನಿನ್ನ ಕೋಮಲವಾದ ಪಾದಗಳಿಂದ ನಡೆದು ಹಿಂದೆಯೇ (ಕಾಠಿನ್ಯದ) ಅಭ್ಯಾಸಮಾಡಿಕೊಂಡಿರುವೆ, ಹಾಗಿಲ್ಲದಿದ್ದರೆ ದಿವ್ಯವಾದ ಮನೆಗಳ ಜಗಲಿ ಪಡಸಾಲೆ ಮುಂತಾದ ನಯವಾದ ನೆಲಗಳು, ಅವುಗಳಲ್ಲಿ ಹೂವಿನ ಹಾಸಿಗೆಗಳು ವೇದಿಗಳು ಮೊದಲಾದುವು (ಸರ್ವಶಕ್ತನಾದ) ನಿನಗೆ ಬಹುವಾಗಿ ಲಭ್ಯವಾಗಿದ್ದರೂ ಕಲ್ಲಿನ ಮೇಲೆ ಈ ನಿನ್ನ ನಾಟ್ಯವು ಯಾವ ಉದ್ದೇಶದಿಂದ?

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂಚಿತ್ಕಾಲಮುಮಾಮಹೇಶ ಭವತಃ ಪಾದಾರವಿಂದಾರ್ಚನೈಃ
ಕಂಚಿದ್ಧ್ಯಾನಸಮಾಧಿಭಿಶ್ಚ ನತಿಭಿಃ ಕಂಚಿತ್ಕಥಾಽಽಕರ್ಣನೈಃ ।
ಕಂಚಿತ್ಕಂಚಿದವೇಕ್ಷಣೈಶ್ಚ ನುತಿಭಿಃ ಕಂಚಿದ್ದಶಾಮೀದೃಶೀಂ
ಯಃ ಪ್ರಾಪ್ನೋತಿ ಮುದಾ ತ್ವದರ್ಪಿತಮನಾ ಜೀವನ್ ಸ ಮುಕ್ತಃ ಖಲು ॥ ೮೧॥

೮೧. ಉಮಾಮಹೇಶನೇ, ಸ್ವಲ್ಪ ಕಾಲವನ್ನು ನಿನ್ನ ಪಾದಾರವಿಂದಗಳ ಅರ್ಚನೆಯಿಂದ, ಸ್ವಲ್ಪ ಕಾಲವನ್ನು ಧ್ಯಾನಸಮಾಧಿಗಳಿಂದ, ಸ್ವಲ್ಪ ಕಾಲವನ್ನು ನಮಸ್ಕಾರಗಳಿಂದ, ಸ್ವಲ್ಪ ಕಾಲವನ್ನು ನಿನ್ನ ಕಥಾಶ್ರವಣಗಳಿಂದ, ಸ್ವಲ್ಪ ಕಾಲವನ್ನು ನಿನ್ನ ಮೂರ್ತಿದರ್ಶನದಿಂದ, ಮತ್ತು ಸ್ವಲ್ಪ ಕಾಲವನ್ನು ಸ್ತುತಿಗಳಿಂದ ಕಳೆಯುತ್ತ ಯಾವನು ಇಂಥ ಅವಸ್ಥೆಯನ್ನು ಹೊಂದುವನೊ ಅವನು ಆನಂದದಿಂದ ನಿನ್ನಲ್ಲಿ ಅರ್ಪಿತವಾದ ಮನಸ್ಸುಳ್ಳವನಾಗಿ ಜೀವಿಸುತ್ತಿರುವಾಗಲೇ ಮುಕ್ತನಾಗಿಬಿಡುವನಲ್ಲವೇ?

Sri Vidyabharathi Book Centre, Sringeri

CC-O. In Public Domain. Digitized by eGangotri

ಧ್ಯಾನಾಂಜನೇನ ಸಮವೇಕ್ಷ್ಯ ತಮಃಪ್ರದೇಶಂ
ಭಿತ್ತ್ವಾ ಮಹಾಬಲಿಭಿರೀಶ್ವರನಾಮಮಂತ್ರೈಃ ।
ದಿವ್ಯಾಶ್ರಿತಂ ಭುಜಗಭೂಷಣಮುದ್ವಹಂತಿ
ಯೇ ಪಾದಪದ್ಮಮಿಹ ತೇ ಶಿವ ತೇ ಕೃತಾರ್ಥಾಃ ॥ ೭೨ ॥

೭೨. ಶಿವನೇ, ಧ್ಯಾನವೆಂಬ ಅಂಜನದ ಸಹಾಯದಿಂದ ಅಜ್ಞಾನವೆಂಬ ಅಂಧಕಾರದಿಂದ ಆವೃತವಾದ ಪ್ರದೇಶವನ್ನು ನೋಡಿ, ಮಹಾಶಕ್ತಿಯುಳ್ಳ ಈಶ್ವರ ನಾಮಗಳೆಂಬ ಮಂತ್ರಗಳಿಂದ ಅದನ್ನು ಭೇದಿಸಿ, ದಿವ್ಯಾಶ್ರಿತವಾದ ನಿನ್ನ ಪಾದ ಪದ್ಮವೆಂಬ ಸರ್ಪಭೂಷಣಮಣಿಯನ್ನು ಯಾರು ಪಡೆದು ಹೊತ್ತುಕೊಂಡು ಹೋಗು ತ್ತಾರೆಯೋ ಅವರೇ ಕೃತಾರ್ಥರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಭೂದಾರತಾಮುದವಹದ್ಯದಪೇಕ್ಷಯಾ ಶ್ರೀ-
ಭೂದಾರ ಏವ ಕಿಮುತಸ್ಸುಮತೇ ಲಭಸ್ವ ।
ಕೇದಾರಮಾಕಲಿತಮುಕ್ತಿಮಹೌಷಧೀನಾಂ
ಪಾದಾರವಿಂದಭಜನಂ ಪರಮೇಶ್ವರಸ್ಯ ॥ ೭೩ ॥

೭೩. ಎಲೈ ಸುಮತಿ, ಯಾವುದರ ಅಪೇಕ್ಷೆಯಿಂದ ಶ್ರೀದೇವಿ-ಭೂದೇವಿಯರಿಗೆ ಪತಿಯಾದ ಮಹಾವಿಷ್ಣುವು ವರಾಹಾವತಾರವನ್ನು ಮಾಡಿದನೋ ಅಂತಹ, ಇಚ್ಛಿಸಲ್ಪಡುವ ಮುಕ್ತಿಯೆಂಬ ಮಹಾಸಸ್ಯಗಳಿಗೆ ಹೊಲವಾಗಿರುವ, ಪರಮೇಶ್ವರನ ಪಾದಾರವಿಂದಭಜನವನ್ನು ಹೊಂದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಶಾಪಾಶಕ್ಲೇಶದುರ್ವಾಸನಾದಿ-
ಭೇದೋದ್ಯುಕ್ತೈರ್ದಿವ್ಯಗಂಧೈರಮಂದೈಃ ।
ಆಶಾಶಾಟೀಕಸ್ಯ ಪಾದಾರವಿಂದಂ
ಚೇತಃಪೇಟೀಂ ವಾಸಿತಾಂ ಮೇ ತನೋತು ॥ ೭೪ ॥

೭೪. ದಿಗಂಬರನ ಪಾದಾರವಿಂದವು ನನ್ನ ಮನಸ್ಸೆಂಬ ಪೆಟ್ಟಿಗೆಯನ್ನು-ಆಶಾ ಪಾಶ, ಕ್ಲೇಶ, ದುರ್ವಾಸನೆ ಮೊದಲಾದುವನ್ನು ಹೋಗಲಾಡಿಸುವುದರಲ್ಲಿ ಉದ್ಯುಕ್ತ ವಾಗಿರುವ ದಿವ್ಯ ಪರಿಮಳದಿಂದ-ಯುಕ್ತವಾಗಿರುವಂತೆ ಮಾಡಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಲ್ಯಾಣಿನಂ ಸರಸಚಿತ್ರಗತಿಂ ಸವೇಗಂ
ಸರ್ವೇಂಗಿತಜ್ಞಮನಘಂ ಧ್ರುವಲಕ್ಷಣಾಢ್ಯಮ್ ।
ಚೇತಸ್ತುರಂಗಮಧಿರುಹ್ಯ ಚರ ಸ್ಮರಾರೇ
ನೇತಸ್ಸಮಸ್ತಜಗತಾಂ ವೃಷಭಾಧಿರೂಢ ॥ ೭೫ ॥

೭೫. ಎಲೈ ಸ್ಮರಾರಿ, ಸರ್ವಲೋಕಾಧಿಪತಿ, ವೃಷಭಾರೂಢನೇ, ಶುಭಕರವೂ ಸರಸಗತಿಯನ್ನುಳ್ಳದ್ದೂ ವೇಗಯುಕ್ತವೂ ಎಲ್ಲಾ ಇಂಗಿತಗಳನ್ನೂ ತಿಳಿಯುವಂಥದ್ದೂ ದೋಷರಹಿತವೂ ಶುಭಲಕ್ಷಣಗಳಿಂದ ತುಂಬಿರುವುದೂ ಆದ ನನ್ನ ಮನಸ್ಸೆಂಬ ಕುದುರೆಯನ್ನು ಏರಿ ಸಂಚರಿಸು.

CC-O. In Public Domain. Digitized by eGangotri

ಭಕ್ತಿರ್ಮಹೇಶಪದಪುಷ್ಕರಮಾವಸಂತೀ
ಕಾದಂಬಿನೀವ ಕುರುತೇ ಪರಿತೋಷವರ್ಷಮ್ ।
ಸಂಪೂರಿತೋ ಭವತಿ ಯಸ್ಯ ಮನಸ್ತಟಾಕ-
ಸ್ತಜ್ಜನ್ಮಸಸ್ಯಮಖಿಲಂ ಸಫಲಂ ಚ ನಾನ್ಯತ್ ॥ ೭೬ ॥

೭೬. ಮಹೇಶನ ಪಾದವೆಂಬ ಆಕಾಶದಲ್ಲಿರುವ ಭಕ್ತಿಯು-ಮೋಡಗಳ ಸಾಲು ಮಳೆಯನ್ನು ಸುರಿಸುವಂತೆ-ಸಂತೋಷವರ್ಷವನ್ನು ಕರೆಯುತ್ತದೆ. ಯಾವನ ಮನಸ್ಸೆಂಬ ಕೆರೆಯು ಅದರಿಂದ ತುಂಬಿಹೋಗುವುದೋ ಅವನ ಜನ್ಮಸಸ್ಯಗಳೆಲ್ಲವೂ ಸಫಲವಾಗುವುವೇ ಹೊರತು ಇತರರವಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಬುದ್ಧಿಃ ಸ್ಥಿರಾ ಭವಿತುಮೀಶ್ವರಪಾದಪದ್ಮ-
ಸಕ್ತಾ ವಧೂರ್ವಿರಹಿಣೇವ ಸದಾ ಸ್ಮರಂತೀ ।
ಸದ್ಭಾವನಾಸ್ಮರಣದರ್ಶನಕೀರ್ತನಾದಿ
ಸಮ್ಮೋಹಿತೇವ ಶಿವಮಂತ್ರಜಪೇನ ವಿಂತೇ ॥ ೭೭ ॥

೭೭. ಹೇ ಪರಮಶಿವನೇ, ಪ್ರಿಯತಮನನ್ನಗಲಿದ ಸಾಧ್ವಿಯು ತನ್ನ ಚಂಚಲವಾದ ಮನಸ್ಸನ್ನು ಸ್ಥಿರವಾಗಿಡುವುದಕ್ಕೆ ತನ್ನ ಪತಿಯ ಪಾದಾರವಿಂದಗಳಲ್ಲಿ ನೆಟ್ಟ ಮನಸ್ಸುಳ್ಳವಳಾಗಿ, ಅವನನ್ನೇ ಸ್ಮರಿಸುತ್ತ, ಶಿವಮಂತ್ರವನ್ನು ಜಪಿಸುತ್ತ, ಒಳ್ಳೆಯ ವಿಷಯಗಳನ್ನೇ ಸ್ಮರಿಸುವುದು, ಭಾವಿಸುವುದು, ನೋಡುವುದು, ವರ್ಣಿಸುವುದು, ಇತ್ಯಾದಿಗಳನ್ನು ಹೇಗೆ ಮಾಡುವಳೊ ಹಾಗೆಯೇ ನನ್ನ ಬುದ್ಧಿಯು ನಿನ್ನ ವಿಯೋಗದುಃಖದಿಂದ ಭ್ರಮೆ ಹೊಂದಿದಂತೆ ಇದ್ದು, ಈಶ್ವರನಾದ ನಿನ್ನ ಪಾದಪದ್ಮದಲ್ಲಿ ಸಕ್ತವಾಗಿ, ಅದನ್ನೇ ಸ್ಮರಿಸುತ್ತ, ತನ್ನನ್ನು ಸ್ಥಿರವಾಗಿರಿಸುವುದಕ್ಕಾಗಿ ಶಿವಮಂತ್ರವನ್ನು ಜಪಿಸುತ್ತ, ಸದ್ಭಾವನೆ ನಿನ್ನ ಸ್ಮರಣ-ದರ್ಶನ-ಕೀರ್ತನಾದಿ ಉಪಾಯಗಳನ್ನು ಆಶ್ರಯಿಸುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಷ್ಯತ್ಯೇಷ ಜನಿಂ ಮನೋಽಸ್ಯ ಕಠಿನಂ ತಸ್ಮಿನ್ನಟಾನೀತಿ ಮದ್
ರಕ್ಷಾಯೈ ಗಿರಿಸೀಮ್ನಿ ಕೋಮಲಪದನ್ಯಾಸಃ ಪುರಾಽಭ್ಯಾಸಿತಃ ।
ನೋಚೇದ್ದಿವ್ಯಗೃಹಾಂತರೇಷು ಸುಮನಸ್ತಲ್ಪೇಷು ವೇದ್ಯಾದಿಷು
ಪ್ರಾಯಸ್ಸ್ವತ್ಸು ಶಿಲಾತಲೇಷು ನಟನಂ ಶಂಭೋ ಕಿಮರ್ಥಂ ತವ ॥ ಲಂ ॥

ಲಂ. ಏಲೈ ಶಂಭುವೇ, 'ಇವನು ಮುಂದೆ ಹುಟ್ಟುತ್ತಾನೆ, ಇವನ ಮನಸ್ಸು ಕಠಿನ. ಅದರಲ್ಲಿ ನಾನು ತಿರುಗಾಡಬೇಕಾಗುವುದು' ಎಂದು ಭಾವಿಸಿ ನನ್ನ ರಕ್ಷಣೆಗಾಗಿಯೇ ಕೈಲಾಸಪರ್ವತಪ್ರದೇಶದಲ್ಲಿ ನಿನ್ನ ಕೋಮಲವಾದ ಪಾದಗಳಿಂದ ನಡೆದು ಹಿಂದೆಯೇ (ಕಾಠಿನ್ಯದ) ಅಭ್ಯಾಸಮಾಡಿಕೊಂಡಿರುವೆ, ಹಾಗಿಲ್ಲದಿದ್ದರೆ ದಿವ್ಯವಾದ ಮನೆಗಳ ಜಗಲಿ ಪಡಸಾಲೆ ಮುಂತಾದ ನಯವಾದ ನೆಲಗಳು, ಅವುಗಳಲ್ಲಿ ಹೂವಿನ ಹಾಸಿಗೆಗಳು ವೇದಿಗಳು ಮೊದಲಾದುವು (ಸರ್ವಶಕ್ತನಾದ) ನಿನಗೆ ಬಹುವಾಗಿ ಲಭ್ಯವಾಗಿದ್ದರೂ ಕಲ್ಲಿನ ಮೇಲೆ ಈ ನಿನ್ನ ನಾಟ್ಯವು ಯಾವ ಉದ್ದೇಶದಿಂದ?

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂಚಿತ್ಕಾಲಮುಮಾಮಹೇಶ ಭವತಃ ಪಾದಾರವಿಂದಾರ್ಚನೈಃ
ಕಂಚಿದ್ಧ್ಯಾನಸಮಾಧಿಭಿಶ್ಚ ನತಿಭಿಃ ಕಂಚಿತ್ಕಥಾSSಕರ್ಣನೈಃ ।
ಕಂಚಿತ್ಕಂಚಿದವೇಕ್ಷಣೈಶ್ಚ ನುತಿಭಿಃ ಕಂಚಿದ್ವಿಶಾಮೀದೃಶೀಂ
ಯಃ ಪ್ರಾಪ್ನೋತಿ ಮುದಾ ತ್ವದರ್ಪಿತಮನಾ ಜೀವನ್ ಸ ಮುಕ್ತಃ ಖಲು ॥ ೮೧॥

೮೧. ಉಮಾಮಹೇಶನೇ, ಸ್ವಲ್ಪ ಕಾಲವನ್ನು ನಿನ್ನ ಪಾದಾರವಿಂದಗಳ ಅರ್ಚನೆಯಿಂದ, ಸ್ವಲ್ಪ ಕಾಲವನ್ನು ಧ್ಯಾನಸಮಾಧಿಗಳಿಂದ, ಸ್ವಲ್ಪ ಕಾಲವನ್ನು ನಮಸ್ಕಾರಗಳಿಂದ, ಸ್ವಲ್ಪ ಕಾಲವನ್ನು ನಿನ್ನ ಕಥಾಶ್ರವಣಗಳಿಂದ, ಸ್ವಲ್ಪ ಕಾಲವನ್ನು ನಿನ್ನ ಮೂರ್ತಿದರ್ಶನದಿಂದ, ಮತ್ತು ಸ್ವಲ್ಪ ಕಾಲಪನ್ನು ಸ್ತುತಿಗಳಿಂದ ಕಳೆಯುತ್ತ ಯಾವನು ಇಂಥ ಅವಸ್ಥೆಯನ್ನು ಹೊಂದುವನೊ ಅವನು ಆನಂದದಿಂದ ನಿನ್ನಲ್ಲಿ ಅರ್ಪಿತವಾದ ಮನಸ್ಸುಳ್ಳವನಾಗಿ ಜೀವಿಸುತ್ತಿರುವಾಗಲೇ ಮುಕ್ತನಾಗಿಬಿಡುವನಲ್ಲವೇ?

Sri Vidyabharathi Book Centre, Sringeri

CC-O. In Public Domain. Digitized by eGangotri

ಬಾಣತ್ವಂ ವೃಷಭತ್ವಮರ್ಧವಪುಷಾ ಭಾರ್ಯಾತ್ವಮಾರ್ಯಾಪತೇ
ಘೋಣಿತ್ವಂ ಸಖಿತಾ ಮೃದಂಗವಹತಾ ಚೇತ್ಯಾದಿ ರೂಪಂ ದಧೌ ।
ತ್ವತ್ಪಾದೇ ನಯನಾರ್ಪಣಂ ಚ ಕೃತವಾಂಸ್ತ್ವದ್ದೀಪಭಾಗೋ ಹರಿಃ
ಪೂಜ್ಯಾತ್ಪೂಜ್ಯತರಃ ಸ ಏವ ಹಿ ನ ಚೇತ್ಕೋ ವಾ ತದನ್ಯೋಽಧಿಕಃ ॥ ೮೨ ॥

೮೨. ಹೇ ಪಾರ್ವತಿಪತಿ, ವಿಷ್ಣುವು-ಬಾಣ, ವೃಷಭ, ಅರ್ಧದೇಹದಿಂದ ಭಾರ್ಯೆ, ವರಾಹ, ಸ್ನೇಹಿತ, ಮೃದಂಗ ಬಾರಿಸುವವನು-ಇದೇ ಮೊದಲಾದ ರೂಪಗಳನ್ನು ಧರಿಸಿದನು. ನಿನ್ನ ಪಾದದಲ್ಲಿ ತನ್ನ ನಯನಕಮಲವನ್ನೇ ಅರ್ಪಿಸಿದನು. ನಿನ್ನ ದೇಹಭಾಗವೇ ಆಗಿರುವ ಹರಿಯು ಪೂಜ್ಯರಿಗಿಂತಲೂ ಪೂಜ್ಯನು. ಹಾಗಲ್ಲದಿದ್ದರೆ ಅವನಿಗಿಂತ ಅಧಿಕನಾದ ಬೇರೊಬ್ಬನು ಯಾವನಿರುವನು?

Sri Vidyabharathi Book Centre, Sringeri

CC-O. In Public Domain. Digitized by eGangotri

ಜನನಮೃತಿಯುತಾನಾಂ ಸೇವಯಾ ದೇವತಾನಾಂ
ನ ಭವತಿ ಸುಖಲೇಶಸ್ಸಂಶಯೋ ನಾಸ್ತಿ ತತ್ರ ।
ಅಜನಿಮಮೃತರೂಪಂ ಸಾಂಬಮೀಶಂ ಭಜಂತೇ
ಯ ಇಹ ಪರಮಸೌಖ್ಯಂ ತೇ ಹಿ ಧನ್ಯಾ ಲಭಂತೇ ॥ ೮೩ ॥

೮೩. ಜನನಮರಣಗಳಿಗೆ ತುತ್ತಾಗುವ ಕ್ಷುದ್ರದೇವತೆಗಳ ಸೇವೆಯಿಂದ ಸುಖ ಲೇಶವೂ ಉಂಟಾಗುವುದಿಲ್ಲ. ಇದರಲ್ಲಿ ಸಂಶಯವಿಲ್ಲ. ಯಾರು ಜನನಮರಣಗಳನ್ನು ಮೀರಿರುವ ಪಾರ್ವತೀವಲ್ಲಭನಾದ ಈಶನನ್ನು ಭಜಿಸುವರೋ ಧನ್ಯರಾದ ಅವರು ಇಲ್ಲಿಯೇ ಪರಮಸೌಖ್ಯವನ್ನು ಹೊಂದುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಲಳ ಶಿವಾನಂದಲಹರೀ

ಶಿವ ತವ ಪರಿಚರ್ಯಾಸನ್ನಿಧಾನಾಯ ಗೌರ್ಯಾ
ಭವ ಮಮ ಗುಣಧುರ್ಯಾಂ ಬುದ್ಧಿಕನ್ಯಾಂ ಪ್ರದಾಸ್ಯೇ ।
ಸಕಲಭುವನಬಂಧೋ ಸಚ್ಚಿದಾನಂದಸಿಂಧೋ
ಸದಯ ಹೃದಯಗೇಹೇ ಸರ್ವದಾ ಸಂವಸ ತ್ವಮ್ ॥ ಲಳ ॥

ಲಳ. ಶಿವನೇ, ಭವನೇ, ಸಕಲಲೋಕಬಂಧುವೇ, ಸಚ್ಚಿದಾನಂದಸಿಂಧುವೇ, ನಿನ್ನ ಮತ್ತು ಗೌರಿಯ ಪರಿಚರ್ಯೆಗಾಗಿ ಸದ್ಗುಣಸಂಪನ್ನಳಾದ ಬುದ್ಧಿಕನ್ಯೆಯನ್ನು ದಾನ ಮಾಡುತ್ತೇನೆ. ಸದಯನೇ, ನನ್ನ ಹೃದಯವೆಂಬ ಮನೆಯಲ್ಲಿ ನೀನು ಸದಾ ವಾಸಿಸು.

Sri Vidyabharathi Book Centre, Sringeri

CC-O. In Public Domain. Digitized by eGangotri

ಜಲಧಿಮಥನದಕ್ಷೋ ನೈವ ಪಾತಾಲಭೇದೀ
ನ ಚ ವನಮೃಗಯಾಯಾಂ ನೈವ ಲುಬ್ಧಃ ಪ್ರವೀಣಃ ।
ಅಶನಕುಸುಮಭೂಷಾವಸ್ತ್ರಮುಖ್ಯಾಂ ಸಪರ್ಯಾಂ
ಕಥಯ ಕಥಮಹಂ ತೇ ಕಲ್ಪಯಾನೀಂದುಮೌಲೇ ॥ ೮೫ ॥

೮೫. ಹೇ ಇಂದುಮೌಳಿ, ನಾನು ಸಮುದ್ರಮಥನದಲ್ಲಾಗಲೀ, ಪಾತಾಳವನ್ನು ಭೇದಿಸುವುದರಲ್ಲಾಗಲೀ, ಸಮರ್ಥನಲ್ಲವೇ ಅಲ್ಲ; ವನಮೃಗಗಳ ಬೇಟೆಯಲ್ಲಿ ಪ್ರವೀಣನಾದ ಬೇಡನೂ ಅಲ್ಲ. ಹೀಗಿರಲು ಭೋಜನ, ಪುಷ್ಪ, ಆಭರಣ, ವಸ್ತ್ರ-ಇವುಗಳನ್ನು ಮುಖ್ಯವಾಗಿ ಹೊಂದಿರುವ ನಿನ್ನ ಪೂಜೆಯನ್ನು ಹೇಗೆ ಮಾಡಲಿ ಹೇಳು?

Sri Vidyabharathi Book Centre, Sringeri

CC-O. In Public Domain. Digitized by eGangotri

ಪೂಜಾದ್ರವ್ಯಸಮೃದ್ಧಯೋ ವಿರಚಿತಾಃ ಪೂಜಾಂ ಕಥಂ ಕುರ್ಮಹೇ
ಪಕ್ಷಿತ್ವಂ ನ ಚ ವಾ ಕಟಿತ್ವಮಪಿ ನ ಪ್ರಾಪ್ತಂ ಮಯಾ ದುರ್ಲಭಮ್ ।
ಜಾನೇ ಮಸ್ತಕಮಂಘ್ರಿಪಲ್ಲವಮುಮಾಜಾನೇ ನ ತೇಽಹಂ ವಿಭೋ
ನ ಜ್ಞಾತಂ ಹಿ ಪಿತಾಮಹೇನ ಹರಿಣಾ ತತ್ತ್ವೇನ ತದ್ರೂಪಿಣಾ ॥ ೮೬ ॥

೮೬. ಉಮಾನಾಥನೇ, ವಿಭುವೇ, ಪೂಜಾದ್ರವ್ಯಗಳು ಸಮೃದ್ಧವಾಗಿದ್ದರೂ (ನಿನ್ನ) ಪೂಜೆಯನ್ನು ಹೇಗೆ ಮಾಡಲಿ? ನಾನು ದುರ್ಲಭವಾದ ಪಕ್ಷಿಯ ರೂಪವನ್ನಾಗಲೀ, ವರಾಹರೂಪವನ್ನಾಗಲೀ, ಹೊಂದಲಿಲ್ಲ. ನಿನ್ನ ಮಸ್ತಕವನ್ನಾಗಲೀ, ಪಾದಪಲ್ಲವವನ್ನಾಗಲೀ, ನಾನರಿಯೆ. ಪಕ್ಷಿ-ವರಾಹ-ರೂಪಗಳನ್ನು ಹೊಂದಿದ ಬ್ರಹ್ಮನಿಗಾಗಲೀ, ವಿಷ್ಣುವಿಗಾಗಲೀ, ನಿನ್ನ ಮಸ್ತಕ-ಅಂಘ್ರಿಗಳ ನಿಜಸ್ವರೂಪವು ತಿಳಿಯಲಿಲ್ಲವೆಂದಮೇಲೆ (ನನ್ನ ಪಾಡೇನು)?

Sri Vidyabharathi Book Centre, Sringeri

CC-O. In Public Domain. Digitized by eGangotri

ಅಶನಂ ಗರಲಂ ಫಣೀ ಕಲಾಪೋ
ವಸನಂ ಚರ್ಮ ಚ ಪಾಪನಂ ಮಹೋಕ್ಷಃ ।
ಮಮ ದಾಸ್ಯಸಿ ಕಿಂ ಕಿಮಸ್ತಿ ಶಂಭೋ
ತವ ಪಾದಾಂಬುಜಭಕ್ತಿಮೇವ ದೇಹಿ ॥ ೮೭ ॥

೮೭. ಶಂಭುವೇ, ವಿಷವೇ ನಿನ್ನ ಆಹಾರ, ಸರ್ಪವೇ ಆಭರಣ, ಚರ್ಮವೇ ಹೊದಿಕೆ, ವೃಷಭವೇ ವಾಹನ. ಹೀಗಿರಲು ನೀನು ನನಗೇನನ್ನು ಕೊಡಬಲ್ಲೆ? ಕೊಡಲು ಏನಿರುವುದು? ನಿನ್ನ ಪಾದಾಂಬುಜದಲ್ಲಿ ಭಕ್ತಿಯನ್ನೇ ಕೊಡು.

Sri Vidyabharathi Book Centre, Sringeri

CC-O. In Public Domain. Digitized by eGangotri

ಯದಾ ಕೃತಾಂಭೋನಿಧಿಸೇತುಬಂಧನಃ
ಕರಸ್ಥಲಾಧಃಕೃತಪರ್ವತಾಧಿಪಃ ।
ಭವಾನಿ ತೇ ಲಂಘಿತಪದ್ಮಸಂಭವ-
ಸ್ತದಾ ಶಿವಾರ್ಚಾಸ್ತವಭಾವನಕ್ಷಮಃ ॥ ೮೮ ॥

೮೮. ಶಿವನೇ, ಎಂದು ನಾನು (ರಾಮನಂತೆ) ಸಮುದ್ರಕ್ಕೆ ಸೇತುವೆಯನ್ನು ಕಟ್ಟಬಲ್ಲೆನೋ, ಎಂದು (ಅಗಸ್ತ್ಯನಂತೆ) ವಿಂಧ್ಯಪರ್ವತವನ್ನು ಕೈಯಿಂದ ಕೆಳಗೆ ಮಾಡಬಲ್ಲೆನೋ, (ವಿಷ್ಣುವಿನಂತೆ) ಬ್ರಹ್ಮನನ್ನು ಮೀರಿದವನಾಗುವೆನೋ, ಆಗ ನಿನ್ನ ಪೂಜೆ-ಸ್ತುತಿ-ಧ್ಯಾನಗಳಲ್ಲಿ ಸಮರ್ಥನಾದೇನು!

Sri Vidyabharathi Book Centre, Sringeri

CC-O. In Public Domain. Digitized by eGangotri

ನತಿಭಿರ್ನುತಿಭಿಸ್ತವೀಶ ಪೂಜಾ-
ವಿಧಿಭಿರ್ಧ್ಯಾನಸಮಾಧಿಭಿರ್ನ ತುಷ್ಟಃ ।
ಧನುಷಾ ಮುಸಲೇನ ಚಾಶ್ಮಭಿರ್ವಾ
ವದ ತೇ ಪ್ರೀತಿಕರಂ ತಥಾ ಕರೋಮಿ ॥ ೮೯ ॥

೮೯. ಈಶನೇ, ನಮಸ್ಕಾರಗಳಿಂದಾಗಲೀ, ಸ್ತೋತ್ರಗಳಿಂದಾಗಲೀ, ಪೂಜಾವಿಧಿಗಳಿಂದಾಗಲೀ, ಧ್ಯಾನ-ಸಮಾಧಿಗಳಿಂದಾಗಲೀ, ನೀನು ತೃಪ್ತನಾಗುವುದಿಲ್ಲ. ಬಿಲ್ಲಿನಿಂದಾಗಲೀ, ಒನಕೆಯಿಂದಾಗಲೀ, ಕಲ್ಲುಗಳಿಂದಾಗಲೀ, ನಿನಗೆ ತುಷ್ಟಿಯೇ? ಹೇಳು. ಅದು ನಿನಗೆ ಸಂತೋಷದಾಯಕವಾದರೆ ಹಾಗೆಯೇ ಮಾಡುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ವಚಸಾ ಚರಿತಂ ವದಾಮಿ ಶಂಭೋ-
ರಹಮುದ್ಯೋಗವಿಧಾಸು ತೇಽಪ್ರಸಕ್ತಃ ।
ಮನಸಾಽಽಕೃತಿಮೀಶ್ವರಸ್ಯ ಸೇವೇ
ಶಿರಸಾ ಚೈವ ಸದಾಶಿವಂ ನಮಾಮಿ ॥ ೯೦ ॥

೯೦. ಉತ್ಕೃಷ್ಟವಾದ ಅಷ್ಟಾಂಗಯೋಗದ ಪ್ರಕಾರಗಳಲ್ಲಿ ಅಪರಿಚಿತನಾದ ನಾನು ಮಾತಿನಿಂದ ಶಂಭುವಿನ ಚರಿತ್ರೆಯನ್ನು ವರ್ಣಿಸುತ್ತೇನೆ; ಮನಸ್ಸಿನಿಂದ ಈಶ್ವರನ ಆಕೃತಿಯನ್ನು ಸೇವಿಸುತ್ತೇನೆ; ಮಸ್ತಕದಿಂದ ಸದಾಶಿವನನ್ನು ನಮಸ್ಕರಿಸುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅದ್ಯಾऽವಿದ್ಯಾ ಹೃದ್ಗತಾ ನಿರ್ಗತಾऽऽಸೀ-
ದ್ವಿದ್ಯಾ ಹೃದ್ಯಾ ಹೃದ್ಗತಾ ತ್ವತ್ಪ್ರಸಾದಾತ್ ।
ಸೇವೇ ನಿತ್ಯಂ ಶ್ರೀಕರಂ ತ್ವತ್ಪದಾಬ್ಜಂ
ಭಾವೇ ಮುಕ್ತೇರ್ಭಾಜನಂ ರಾಜಮೌಲೇ ॥ ೯೧॥

೯೧. ಹೇ ರಾಜಮೌಳಿ, ನನ್ನ ಹೃದಯದಲ್ಲಿ ಅನಾದಿಕಾಲದಿಂದಲೂ ಇದ್ದ ಅವಿದ್ಯೆಯು ಕಳೆದುಹೋಗಿ ನಿನ್ನ ಪ್ರಸಾದದಿಂದ ಮನೋಜ್ಞವಾದ ವಿದ್ಯೆಯು ಮನಸ್ಸನ್ನು ಪ್ರವೇಶಿಸಿತು. ಮಂಗಳಕರವಾಗಿಯೂ ಮೋಕ್ಷದ ಪಾತ್ರವಾಗಿಯೂ ಇರುವ ನಿನ್ನ ಪಾದಕಮಲವನ್ನು ಸೇವಿಸುತ್ತೇನೆ ಮತ್ತು ಧ್ಯಾನಿಸುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ದೂರೀಕೃತಾನಿ ದುರಿತಾನಿ ದುರಕ್ಷರಾಣಿ
ದೌರ್ಭಾಗ್ಯದುಃಖದುರಪಂಕೃತಿದುರ್ವಚಾಂಸಿ ।
ಸಾರಂ ತ್ವದೀಯಚರಿತಂ ನಿತರಾಂ ಪಿಬಂತಂ
ಗೌರೀಶ ಮಾಮಿಹ ಸಮುದ್ಧರ ಸತ್ಕಟಾಕ್ಷೈಃ ॥ ೯೨ ॥

೯೨. ಎಲ್ಮೆ ಗೌರೀಶನೇ, ಪಾಪ, ಕೆಟ್ಟ ಹಣೆಯ ಬರಹ, ದೌರ್ಭಾಗ್ಯ, ದುರಹಂಕಾರ, ದುರ್ವಚನ-ಇವೆಲ್ಲ ನನ್ನಿಂದ ದೂರಸರಿದುವು. ಸಾರಭೂತವಾದ ನಿನ್ನ ಚರಿತಾಮೃತವನ್ನು ಚೆನ್ನಾಗಿ ಪಾನಮಾಡುತ್ತಿರುವ ನನ್ನನ್ನು ಇಲ್ಲಿಯೇ ನಿನ್ನ ಸತ್ಕಟಾಕ್ಷಗಳ ಮೂಲಕ ಉದ್ಧರಿಸು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸೋಮಕಲಾಧರಮೌಲೌ
ಕೋಮಲಘನಕಂಧರೇ ಮಹಾಮಹಸಿ ।
ಸ್ವಾಮಿನಿ ಗಿರಿಜಾನಾಥೇ
ಮಾಮಕಹೃದಯಂ ನಿರಂತರಂ ರಮತಾಮ್ ॥ ೯೩ ॥

೯೩. ಶಿರದಲ್ಲಿ ಚಂದ್ರಕಲೆಯನ್ನು ಧರಿಸಿರುವ, ಕೋಮಲವಾದ ಮತ್ತು ನೀಲ ಮೇಘದಂಥ ಕಂಠವುಳ್ಳ, ಮಹಾಜ್ಯೋತಿಯಾದ, ಪ್ರಭುವಾದ ಗಿರಿಜಾನಾಥನಲ್ಲಿ ನನ್ನ ಹೃದಯವು ನಿರಂತವೂ ರಮಿಸಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾ ರಸನಾ ತೇ ನಯನೇ ತಾವೇವ
ಕರೌ ಸ ಏವ ಕೃತಕೃತ್ಯಃ ।
ಯಾ ಯೇ ಯೌ ಯೋ ಭರ್ಗಂ
ವದತೀಕ್ಷೇತೇ ಸದಾಽರ್ಚತಃ ಸ್ಮರತಿ ॥ ೯೪ ॥

೯೪. ಯಾವ ನಾಲಗೆಯು ಶಿವನಾಮವನ್ನು ನುಡಿಯುವುದೋ ಅದೇ ನಿಜವಾದ ನಾಲಗೆ. ಯಾವ ಕಣ್ಣುಗಳು ಶಿವನನ್ನು ನೋಡುತ್ತವೆಯೋ ಅವೇ ನಿಜವಾದ ಕಣ್ಣುಗಳು. ಯಾವ ಕೈಗಳು ಶಿವನನ್ನು ಅರ್ಚಿಸುತ್ತವೆಯೋ ಅವೇ ನಿಜವಾದ ಕೈಗಳು. ಯಾವನು ಶಿವನನ್ನು ಸ್ಮರಿಸುವನೋ ಅವನೇ ಕೃತಕೃತ್ಯನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅತಿಮೃದುಲೌ ಮಮ ಚರಣಾ-
ವತಿಕಠಿನಂ ತೇ ಮನೋ ಭವಾನೀಶ ।
ಇತಿ ವಿಚಿಕಿತ್ಸಾಂ ಸನ್ತ್ಯಜ
ಶಿವ ಕಥಮಾಸೀದ್ಗಿರೌ ತಥಾ ಪ್ರವೇಶಃ ॥ ೯೫ ॥

೯೫. ಎಲೈ ಭವಾನೀಪತಿ, ಶಿವನೇ, 'ನನ್ನ ಚರಣಗಳು ಅತಿ ಮೃದು, ನಿನ್ನ ಮನಸ್ಸು ಅತಿ ಕಠಿನ' ಎಂಬೀ ಸಂಶಯವನ್ನು ಬಿಡು. ನಿನಗೆ ಕೈಲಾಸಪರ್ವತದಲ್ಲಿ ವಾಸವು ಹೇಗಾಯಿತು?

Sri Vidyabharathi Book Centre, Sringeri

CC-O. In Public Domain. Digitized by eGangotri

ಧೈರ್ಯಾಂಕುಶೇನ ನಿಭೃತಂ
ರಭಸಾದಾಕೃಷ್ಯ ಭಕ್ತಿಶೃಂಖಲಯಾ ।
ಪುರಹರ ಚರಣಾಲಾನೇ
ಹೃದಯಮದೇಭಂ ಬಧಾನ ಚಿದ್ಯಂತ್ರೈಃ ॥ ೯೬ ॥

೯೬. ಹೇ ಪುರಹರ, ನನ್ನ ಮನಸ್ಸೆಂಬ ಮದ್ದಾನೆಯನ್ನು ಧೈರ್ಯವೆಂಬ ಅಂಕುಶದಿಂದ ಸುಮ್ಮನಾಗಿಸಿ, ಭಕ್ತಿಯೆಂಬ ಸರಪಳಿಯಿಂದ ಬಲವಾಗಿ ಸೆಳೆದು, ಚಿದ್-ಯಂತ್ರದಿಂದ ನಿನ್ನ ಪಾದವೆಂಬ ಕಂಬಕ್ಕೆ ಕಟ್ಟು.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಚರತ್ಯಭಿತಃ ಪ್ರಗಲ್ಭವೃತ್ತ್ಯಾ
ಮದವಾನೇಷ ಮನಃಕರೀ ಗರೀಯಾನ್ ।
ಪರಿಗೃಹ್ಯ ನಯೇನ ಭಕ್ತಿರಜ್ಜ್ವಾ
ಪರಮ ಸ್ಥಾಣುಪದಂ ದೃಢಂ ನಯಾಮುಮ್ ॥ ೯೭ ॥

೯೭. ಹೇ ಪರಮಾತ್ಮನೇ, ನನ್ನ ಮನಸ್ಸೆಂಬ ಬಲವಾದ ಮದ್ದಾನೆಯು ಸ್ವತಂತ್ರವಾಗಿ ಎಲ್ಲಾ ಕಡೆಯಲ್ಲಿಯೂ ಸಂಚರಿಸುತ್ತಿದೆ. ಎಲೈ ಶ್ರೇಷ್ಠನಾದ ದೇವನೇ, ಅದನ್ನು ಭಕ್ತಿಯೆಂಬ ಹಗ್ಗದಿಂದ ಉಪಾಯವಾಗಿ ಹಿಡಿದು ಈಶ್ವರನ ಪಾದವೆಂಬ ಮರದ ಬುಡಕ್ಕೆ ದೃಢವಾಗಿ ಕಟ್ಟು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸರ್ವಾಲಂಕಾರಯುಕ್ತಾಂ ಸರಲಪದಯುತಾಂ ಸಾಧುವೃತ್ತಾಂ ಸುವರ್ಣಾಂ
ಸದ್ಭಿಃ ಸಂಸ್ತೂಯಮಾನಾಂ ಸರಸಗುಣಯುತಾಂ ಲಕ್ಷಿತಾಂ ಲಕ್ಷಣಾಢ್ಯಾಮ್ ।
ಉದ್ಯದ್ಭೂಷಾವಿಶೇಷಾಮುಪಗತವಿನಯಾಂ ದ್ಯೋತಮಾನಾರ್ಥರೇಖಾಂ
ಕಲ್ಯಾಣೀಂ ದೇವ ಗೌರೀಪ್ರಿಯ ಮಮ ಕವಿತಾಕನ್ಯಕಾಂ ತ್ವಂ ಗೃಹಾಣ ॥ ೯೮॥

೯೮. ಹೇ ಗೌರೀಪ್ರಿಯ, ದೇವನೇ, ಸರ್ವಾಲಂಕಾರಯುಕ್ತಳಾದ, ಸರಳ ಪದಗಳಿಂದ ಕೂಡಿರುವ, ಯೋಗ್ಯವಾದ ವೃತ್ತಗಳನ್ನುಳ್ಳ, ಒಳ್ಳೆಯ ಅಕ್ಷರಗಳನ್ನು ಹೊಂದಿರುವ, ವಿದ್ವಾಂಸರಿಂದ ಪ್ರಶಂಸಿಸಲ್ಪಡುತ್ತಿರುವ, ರಸದಿಂದಲೂ ಗುಣದಿಂದಲೂ ಕೂಡಿರುವ, ವಸ್ತುಪ್ರಶಂಸಾರೂಪವಾದ ಕಾವ್ಯಲಕ್ಷಣಗಳನ್ನುಳ್ಳ, ಅಭಿವ್ಯಕ್ತವಾಗಿ ಕಾಣುವ ಕಾವ್ಯಶೋಭಾಕರಗಳಾದ ಅಲಂಕಾರವಿಶೇಷಗಳಿಂದ ಕೂಡಿದ, ವಿನಯಾನ್ವಿತೆಯಾದ, ವ್ಯಂಗ್ಯಾರ್ಥವೆಂಬ ಸ್ಫುಟವಾದ ಧನರೇಖೆಯನ್ನುಳ್ಳ, ಕಲ್ಯಾಣಿಯಾದ ನನ್ನ ಕವಿತಾಕನ್ಯೆಯನ್ನು ನೀನು ಸ್ವೀಕರಿಸು.

Sri Vidyabharathi Book Centre, Sringeri

CC-O. In Public Domain. Digitized by eGangotri

ಇದಂ ತೇ ಯುಕ್ತಂ ವಾ ಪರಮಶಿವ ಕಾರುಣ್ಯಜಲಧೇ
ಗತೌ ತಿರ್ಯಗ್ರೂಪಂ ತವ ಪದಶಿರೋದರ್ಶನಧಿಯಾ ।
ಪರಿಭ್ರಾಣೌ ತೌ ದಿವಿ ಭುವಿ ಚರಂತೌ ಶ್ರಮಯುತೌ
ಕಥಂ ಶಂಭೋ ಸ್ವಾಮಿನ್ ಕಥಯ ಮಮ ವೇದ್ಯೋಽಸಿ ಪುರತಃ ॥ ೯೯ ॥

೯೯. ಪರಮಶಿವನೇ, ಕಾರುಣ್ಯಜಲಧಿಯೇ, ಶಂಭುವೇ, ಸ್ವಾಮಿಯೇ, ಇದು (ಎಂದರೆ ನಿನ್ನ ದರ್ಶನಕ್ಕಾಗಿ ಹಂಬಲಿಸುತ್ತಿರುವ ನನಗೆ ದರ್ಶನವೀಯದಿರುವುದು) ನಿನಗೆ ಯುಕ್ತವೆ? ನಿನ್ನ ಪಾದವನ್ನೂ ಶಿರಸ್ಸನ್ನೂ ನೋಡಬೇಕೆಂಬ ಬುದ್ಧಿಯಿಂದ ಆ ವಿಷ್ಣು-ಬ್ರಹ್ಮರು ತಿರ್ಯಗ್ರೂಪವನ್ನು ಧರಿಸಿ ಭೂಮಿಯಲ್ಲೂ ಆಕಾಶದಲ್ಲೂ ಸಂಚರಿಸಿ ವೃಥಾ ಶ್ರಮಪಟ್ಟರು. ಹೀಗಿರಲು ಹೇ ಶಂಭುವೇ, ಸ್ವಾಮಿಯೇ, ಹೇಗೆ ನೀನು ನನಗೆ ನನ್ನೆದುರಿನಲ್ಲಿಯೇ ಗೋಚರವಾಗುವಿಯೆಂಬುದನ್ನು ದಯಮಾಡಿ ಹೇಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ತೋತ್ರೇಣಾಲಮಹಂ ಪ್ರವಚ್ಮಿ ನ ಮೃಷಾ ದೇವಾ ವಿರಿಂಚಾದಯಃ
ಸ್ತುತ್ಯಾನಾಂ ಗಣನಾಪ್ರಸಂಗಸಮಯೇ ತ್ವಾಮಗ್ರಗಣ್ಯಂ ವಿದುಃ ।
ಮಾಹಾತ್ಮ್ಯಾಗ್ರವಿಚಾರಣಪ್ರಕರಣೇ ಧಾನಾತುಷಸ್ತೋಮವ-
ದ್ಧೂತಾಸ್ತ್ವಾಂ ವಿದುರುತ್ತಮೋತ್ತಮಫಲಂ ಶಂಭೋ ಭವತ್ಸೇವಕಾಃ ॥ ೧೦೦॥

೧೦೦. ಹೇ ಶಂಭು, ಹೊಗಳಿಕೆಯಿನ್ನು ಸಾಕು, ನಾನು ಸುಳ್ಳು ಹೇಳುವುದಿಲ್ಲ. ಸ್ತುತಿಯೋಗ್ಯರಾದವರ ಪರಸ್ಪರ ಯೋಗ್ಯತಾಗಣನೆಯ ಸಮಯದಲ್ಲಿ ಬ್ರಹ್ಮಾದಿ ದೇವತೆಗಳು ನಿನ್ನನ್ನೇ ಅಗ್ರಗಣ್ಯನೆಂದು ತಿಳಿಯುತ್ತಾರೆ. ಮಹಾತ್ಮ್ಯವುಳ್ಳವರಲ್ಲಿ ಅಗ್ರಗಣ್ಯರು ಯಾರು?-ಎಂಬ ಪ್ರಶ್ನೆ ಬಂದಾಗ ಇತರ ದೇವತೆಗಳು ಹೊಟ್ಟಿನಂತೆ ಹಾರಿ ಹೋಗುವರೆಂದೂ ನೀನೊಬ್ಬನೇ ಉತ್ತಮೋತ್ತಮಫಲವೆಂದೂ ನಿನ್ನ ಭಕ್ತರು ಅರಿಯುತ್ತಾರೆ.

ಇತಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀಮಚ್ಛಂಕರಾಚಾರ್ಯ ವಿರಚಿತ ಶಿವಾನಂದಲಹರೀ ಸಮಾಪ್ತಾ ॥

Sri Vidyabharathi Book Centre, Sringeri

ಶ್ರೀಮತ್ ಪರಮಹಂಸ ಪರಿವ್ರಾಜಕಾಚಾರ್ಯರಾದ ಶ್ರೀ ಶಂಕರಾಚಾರ್ಯರಿಂದ ರಚಿಸಲ್ಪಟ್ಟ ಶಿವಾನಂದಲಹರಿಯು ಮುಗಿದಿದೆ.

CC-O. In Public Domain. Digitized by eGangotri

ಪರಿಶಿಷ್ಟ

ಶ್ಲೋಕ ೨೩: ಪೂರ್ವದಲ್ಲಿ ಬ್ರಹ್ಮನಿಗೂ ವಿಷ್ಣುವಿಗೂ ಶಿವಲಿಂಗದ ತಲೆ-ಬುಡಗಳನ್ನು ಕಾಣುವ ವಿಷಯದಲ್ಲಿ ಸ್ಪರ್ಧೆಯುಂಟಾಯಿತೆಂದೂ, ಬ್ರಹ್ಮನು ಶಿವಲಿಂಗದ ತಲೆಯನ್ನು ಕಾಣಲು ಪಕ್ಷಿಯಾಗಿ ಬಹುಕಾಲ ಮೇಲಕ್ಕೆ ಹಾರಿ ಕೃತಾರ್ಥನಾಗದೆ ಹಿಂದಿರುಗಿದನೆಂದೂ, ವಿಷ್ಣುವು ವರಾಹರೂಪವನ್ನು ಧರಿಸಿ ಭೂಮಿಯನ್ನು ಭೇದಿಸುತ್ತ ಬಹುಕಾಲ ಯತ್ನಿಸಿ ವಿಫಲಮನೋರಥನಾದನೆಂದೂ ಪುರಾಣದಲ್ಲಿದೆ.

ಶ್ಲೋಕ ೬೩: ಕಾಳಹಸ್ತಿಕ್ಷೇತ್ರಮಾಹಾತ್ಮ್ಯದಲ್ಲಿರುವ ಬೇಡರ ಕಣ್ಣಪ್ಪನ ಕಥೆಯು ಇಲ್ಲಿ ಸೂಚಿತವಾಗಿದೆ. ಆತನು ಬಾಯಲ್ಲಿ ನೀರು ತುಂಬಿಕೊಂಡು ಬಂದು ಅದನ್ನು ಶಿವಲಿಂಗದ ಮೇಲೆ ಉಗುಳಿದ್ದು, ತಾನು ತಿಂದುಳಿದ ಮಾಂಸವನ್ನು ನೈವೇದ್ಯವಾಗಿ ನೀಡಿದ್ದು, ಶಿವನ ಕಣ್ಣಲ್ಲಿ ನೀರು ಸೋರುತ್ತಿದ್ದುದರಿಂದ ತನ್ನ ಒಂದು ಕಣ್ಣನ್ನು ಕಿತ್ತು ಶಿವನಿಗಿತ್ತಮೇಲೆ ಮತ್ತೊಂದು ಕಣ್ಣನ್ನೂ ಕೊಡಬೇಕಾಗಿ ಬಂದಾಗ ಶಿವನ ಕಣ್ಣಿನ ಸ್ಥಾನದಲ್ಲಿ ಪಾದರಕ್ಷೆಯಿಂದ ಕೂಡಿದ ತನ್ನ ಪಾದವನ್ನು ಗುರುತಿಗಾಗಿ ಮೆಟ್ಟಿಕೊಂಡಿದ್ದು—ಇವೆಲ್ಲವನ್ನೂ ಇಲ್ಲಿ ಸೂಚಿಸಲಾಗಿದೆ. ಶಿವನು ಶಿವನ ಭಕ್ತಿಗೆ ಮೆಚ್ಚಿ ಶಿವನನ್ನು ತನ್ನ ಪ್ರಮಥಗಣಗಳಲ್ಲೊಬ್ಬರನ್ನಾಗಿ ಮಾಡಿದನಂತೆ.

Sri Vidyabharathi Book Centre, Shageri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

"ಶಿವಾನಂದಲಹರೀ" – ಶಂಕರಾಚಾರ್ಯರ ಹೃದಯದಿಂದ ಭವಜೀವಿಗಳ ಅಘಮೋಚನೆಗಾಗಿ ಇಳಿದುಬಂದ ಭಕ್ತಿಗಂಗೆಯಂತೆ ಇದೆ. ಇಲ್ಲಿ ಬರುವ ಪ್ರತಿಯೊಂದು ಶ್ಲೋಕವೂ ಭಕ್ತ ಭಗವಂತನೊಡನೆ ಐಕ್ಯವಾಗಬೇಕೆಂಬ ಅಭೀಪ್ಸೆಯನ್ನು ವ್ಯಕ್ತಪಡಿಸುವುದು. ಒಂದೊಂದು ಶ್ಲೋಕದಲ್ಲಿಯೂ ಒಂದೊಂದು ಬಗೆಯ ಉಪಮಾನವಿರುವುದು. ಒಂದೊಂದು ರೀತಿಯಲ್ಲಿ ಭಕ್ತನನ್ನು ಭಗವಂತನೊಂದಿಗೆ ಕಟ್ಟಿ ಹಾಕಿರುವುದು.

Code : 625

Rs : 20-00

Shivananda Lahari

Sri Vidyabharati Book Centre, Srinagar

Sri Ramakrishna Ashrama, Yadavagiri, Mysore 570 020